ಡಾ. ಬ್ರಹ್ಮರ್ಷಿ ಪಿತಾಮಹ ಸುಭಾಷ್ ಪತ್ರೀಜಿ ಆಶೀರ್ವಾದಗಳೊಂದಿಗೆ

# ಈ ಜೀವನವಿರುವುದು ಏಕೆ?

ತಟವರ್ತಿ ವೀರರಾಘವರಾವು



ಅನುವಾದ : ಕೆ. ಶೋಭಾಲತ

ಬ್ರಹ್ಮರ್ಷಿ ಪತ್ರೀಜಿ ದಿವ್ಯ ಆಶೀರ್ವಾದಗಳೊಂದಿಗೆ

# ಈ ಜೀವನವಿರುವುದು ಏಕೆ?

ಅನುವಾದ : ಕೆ. ಶೋಭಾಲತ


ಶ್ರೀರಾಮ ಪಬ್ಲಿಕೇಶನ್ಸ್

ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,

ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – 560 066

---

ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್

ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

**Eee Jeevanaviruvudu Eke?**
Edited & Published by **Srirama Publications,**
Sri Ramadhama Pyaramid Dyanakendra, Narayanappa
Garden, Whitefiled, Bangalore - 560 066
**M : 9449695503, 8050082689, 9886532204**

| | | |
|---|---|---|
| ಮೊದಲನೇ ಮುದ್ರಣ | : | 2025 |
| ಹಕ್ಕುಗಳು | : | ಪ್ರಕಾಶಕರು |
| ಪ್ರಕಾಶಕರು | : | **ಶ್ರೀರಾಮ ಪಬ್ಲಿಕೇಶನ್ಸ್**<br>ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,<br>ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್,<br>ಬೆಂಗಳೂರು – 560 066<br>ಮೊ.: 9449695503, 9886532204 |
| ಬಳಸಿದ ಕಾಗದ | : | 70 ಜಿ.ಎಸ್.ಎಂ. ಮ್ಯಾಪ್‌ಲಿಥೊ ಡೆಮಿ 1/8 |
| ಪ್ರತಿಗಳು | : | 1000 |
| ಬೆಲೆ | : | 140/-ರೂ |
| ಪುಟಗಳು | : | iv+49= 53 |
| ಮುಖಚಿತ್ರ | : | ಚಂದ್ರಕಾಂತ ಪಟ್ಟಣ |
| ಪುಟ ವಿನ್ಯಾಸ | : | **ನಿರಂತರ ಸಾಯಿ ಕಮ್ಯೂನಿಕೇಷನ್ ಪ್ರೈ .ಲಿ**<br>ಮೊ: 96328 12541 |

ಮುದ್ರಣ :
**ಪೂರ್ಣಾ ಗ್ರಾಫಿಕ್ಸ್,**
ಬೆಂಗಳೂರು 9844167475

# ಸ್ವ-ಪರಿಚಯ

ನನ್ನ ಹೆಸರು ಎಚ್.ಎನ್.ಶ್ರೀನಿವಾಸ. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ, ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ, ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999ರಲ್ಲಿ ಎಸ್.ಎಸ್.ವೈ. ಅಂದರೆ, ಸಿದ್ಧಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎನ್.ವಿಜಯಲಕ್ಷ್ಮಿ ಸೇರಿ 2008ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ 'ಶ್ರೀ ರಾಮಧಾಮ ಧ್ಯಾನ ಮಂದಿರ' ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು. ಇದನ್ನು ಸಿದ್ಧಸಮಾಧಿ ಯೋಗ ಸಂಸ್ಥಾಪಕರಾದ ಡಾ.ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಎಸ್.ಎಸ್.ವೈ. ಶಿಕ್ಷಕರಿಂದ ಸಾಮೂಹಿಕ ಧ್ಯಾನ ತರಬೇತಿಗಳನ್ನು ಆಯೋಜಿಸುತ್ತಿದ್ದೆವು. 2009ರಲ್ಲಿ ಬ್ರಹ್ಮರ್ಷಿ ಪಿತಾಮಹ ಡಾ.ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ 'ಆನಾಪಾನಸತಿ ಧ್ಯಾನ ವಿಧಾನ'ವನ್ನು ಪರಿಚಯ ಮಾಡಿಸಿದರು. ಪತ್ರೀಜಿಯವರನ್ನು ಭೇಟಿಯಾದ ನಂತರ, ದಿನನಿತ್ಯದ ನನ್ನ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ ತತ್ವಸಿದ್ಧಾಂತದಲ್ಲಿ ಗುರು–ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. 'ಯಾರೂ ಶಾಶ್ವತವಾಗಿ ಗುರುಗಳಲ್ಲ, ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ, ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ, ಎಂದಿಗೂ ಶಿಷ್ಯರಾಗಿಯೇ ಇರಬೇಡಿ' ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದವಕಾಶವನ್ನು ಒದಗಿಸಿದರು.

ಇದರಲ್ಲಿ ನನಗೆ 'ನಿತ್ಯಅನ್ನದಾನ ಸೇವೆ'ಯ ಜವಾಬ್ದಾರಿಯನ್ನು ವಹಿಸಲಾಯಿತು. ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ, ಆಸಕ್ತಿಯಿಂದ ಧ್ಯಾನಾಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ 'ಸಸ್ಯಾಹಾರ', 'ಸ್ವಾಧ್ಯಾಯ', 'ಸಜ್ಜನ–ಸಾಂಗತ್ಯ, ಅಂದರೆ, ಸತ್ಸಂಗ' ಹಾಗೂ 'ಪಿರಮಿಡ್ ಶಕ್ತಿ ಬಳಕೆ' ಅವಶ್ಯಕ ಎಂದು ಆಧ್ಯಾತ್ಮಶಾಸ್ತ್ರ ತಿಳಿಸುತ್ತದೆ. ನಿರಂತರ, ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ–ವಿಕಾಸ, ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು. ಹೊಸ ಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ 'ಶ್ರೀರಾಮ ಪಬ್ಲಿಕೇಶನ್ಸ್' ಹೆಸರಿನ ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರರಾಘವರಾವ್ ರವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು. ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರುಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡದ ಆಧ್ಯಾತ್ಮ ಸಾಧಕರಿಗೂ ದೊರಕಲೆಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು,

**ಎಚ್. ಎನ್. ಶ್ರೀನಿವಾಸ** ಮತ್ತು

**ಎಸ್. ಎನ್. ವಿಜಯಲಕ್ಷ್ಮಿ ಸಂಸ್ಥಾಪಕರು,** ಶ್ರೀರಾಮಧಾಮ ಧ್ಯಾನಕೇಂದ್ರ

# ಪರಿವಿಡಿ


| | |
|---|---|
| ಈ ಜೀವವಿರುವುದು ಏಕೆ? | 1 |
| ಗಮ್ಯ ಲಕ್ಷ್ಯ | 24 |
| ಕಾವಲುಗಾರನಿಲ್ಲದ ಕುರಿಗಳು | 25 |
| ನದಿ ಸಮುದ್ರ | 29 |
| ಸ್ವ ಗ್ರಹ | 30 |
| ಸಾಂಖ್ಯ ಯೋಗ... ಪಂಚ ವಿಂಶತಿ” | 34 |
| ಅನುಬಂಧ | 35 |
| ಮೌಲ್ಯಯುತ ಆಧ್ಯಾತ್ಮಿಕ ಸತ್ಯಗಳು | 39 |
| ಬ್ರಹ್ಮ ಮಾನಸ ಪುತ್ರರು | 41 |
| ಬ್ರಾಹ್ಮಣರು – ದ್ವಿಜತ್ವ | 42 |
| ಆತ್ಮ ಜ್ಞಾನ ಬ್ರಹ್ಮ ಜ್ಞಾನ | 43 |
| ನಿರ್ವಾಣದ ನಂತರ | 45 |
| ಸ್ಪಿರಿಚುಯಲ್ ಸೈನ್ಸ್ – ಆಧ್ಯಾತ್ಮಿಕ ವಿಜ್ಞಾನ ಶಾಸ್ತ | 48 |

# ಈ ಜೀವನವಿರುವುದು ಏಕೆ

ಪ್ರತಿ ಮಾನವನಲ್ಲಿ ಯಾವುದೋ ಒಂದು ದಿನ ಈ ಪ್ರಶ್ನೆ ಉದ್ಭವಿಸುತ್ತದೆ. ಸಾಮಾನ್ಯ ಸಂದರ್ಭಗಳಲ್ಲಿ ಅನಿಸದಿದ್ದರೂ ಕಷ್ಟಗಳು ಬಂದಾಗ, ಕಷ್ಟಗಳ ದಾಳಿಗೆ ಸಿಲುಕಿದಾಗ ಅನಿಸುತ್ತಿರುತ್ತದೆ. ಏನು ಈ ಜೀವನ? ಏಕೆ ಈ ಜೀವನ? ಆ ಭಗವಂತ ನನ್ನನ್ನು ಏಕೆ ಹುಟ್ಟಿಸಿದ್ದಾನೆ? ಹುಟ್ಟಿಸಿ ಏಕೆ ಹೀಗೆ ಕಷ್ಟಗಳನ್ನು ಕೊಡುತ್ತಿದ್ದಾನೆ? ನನ್ನನ್ನು ಹುಟ್ಟಿಸದೇ ಇದ್ದಿದ್ದರೆ ಈ ಕಷ್ಟಗಳು ಇರುತ್ತಿರಲಿಲ್ಲವಲ್ಲ..! ಎಂದುಕೊಳ್ಳುತ್ತಾ, ಬಾದೆ ಪಡುತ್ತಾ ಅರ್ಥವಾಗದ ಅಯೋಮಯ ಸ್ಥಿತಿಯಲ್ಲಿ ವಿಲವಿಲ ಒದ್ದಾಡುತ್ತಾರೆ.

ಈ ಜೀವನ ಏತಕ್ಕಾಗಿ? ಎನ್ನುವುದು ತುಂಬಾ ಜನರಿಗೆ ಉತ್ತರ ದೊರೆಯದ ಪ್ರಶ್ನೆಯಾಗಿಯೇ ಇರುತ್ತದೆ. ಈ ಜೀವನದ ಗುರಿಯನ್ನು ಅಂದರೆ ಈ ಜೀವನದಲ್ಲಿ ಏನು ಮಾಡಬೇಕು ಏನು ಸಾಧಿಸಬೇಕು ಜೀವನ ಗಮ್ಯವೆಂದರೇನು? ಎಲ್ಲಿಗೆ ಈ ಜೀವನ ಪ್ರಯಾಣ? ಸಾಯುವವರೆಗೆ... ನಾ ಇಲ್ಲದಿದ್ದರೆ ಏನಾದರೂ ಇದೆಯೇ ಈ ಜೀವನ ಪ್ರಯಾಣಕ್ಕೆ ಅಂತ್ಯವಿದೆಯೇ? ಇದ್ದರೆ ಯಾವಾಗ ಅಂತ್ಯವಾಗುತ್ತದೆ? ಎಲ್ಲಿಯವರೆಗೂ ಈ ಜೀವನ ಪ್ರಯಾಣ? ಎನ್ನುವುದು ತುಂಬಾ ಜನರಿಗೆ ಅರ್ಥವಾಗುವುದಿಲ್ಲ.

ತುಂಬಾ ಜನರು ಈ ಜೀವನದಲ್ಲಿ ಚೆನ್ನಾಗಿ ಹಣ ಸಂಪಾದಿಸಬೇಕೆಂದುಕೊಳ್ಳುತ್ತಾರೆ. ಅದೇ ತಮ್ಮ ಜೀವನ ಗಮ್ಯ ಎಂದುಕೊಳ್ಳುತ್ತಾರೆ. ಇನ್ನೂ ಕೆಲವರು ದೊಡ್ಡ ದೊಡ್ಡ ಸ್ಥಾನಗಳಲ್ಲಿ ಅಲಂಕರಿಸಬೇಕೆಂದುಕೊಳ್ಳುತ್ತಾರೆ. ಇನ್ನು ಕೆಲವರು ಉನ್ನತ ಸ್ಥಿತಿಯನ್ನು ತಂದು ಕೊಡುವ ದೊಡ್ಡ ಹುದ್ದೆಗಳು ಮಾಡಬೇಕೆಂದುಕೊಳ್ಳುತ್ತಾರೆ. ಕೆಲವರು ದೊಡ್ಡ ನಟನಾಗಬೇಕೆಂದು, ಇನ್ನೂ ಕೆಲವರು ಡೈರೆಕ್ಟರ್ ಆಗಬೇಕೆಂದು, ಸಂಗೀತಕಾರರಾಗಬೇಕೆಂದು, ಮತ್ತೆ ಮತ್ತೆ ಕೆಲವರು ಒಳ್ಳೆಯ ಗಾಯಕರಾಗಬೇಕೆಂದು, ಇನ್ನೂ ಕೆಲವರು ಒಳ್ಳೆಯ ಆಟಗಾರರಾಗಬೇಕೆಂದು ಅಥವಾ ಯಾವುದೋ ಒಂದು ರಂಗದಲ್ಲಿ ಗಿನ್ನಿಸ್ ಬುಕ್‌ನ ರೆಕಾರ್ಡ್ ಮಾಡಬೇಕೆಂದು, ಕೆಲವರು ವಿಜ್ಞಾನಿಗಳಾಗಬೇಕೆಂದು, ಕೆಲವರು ಸಾಫ್ಟವೇರ್ ರಂಗದಲ್ಲಿ ವಿರಾಜಿಸಬೇಕೆಂದು ಹೀಗೆ ವಿಧವಿಧವಾಗಿ ಜೀವನದಲ್ಲಿ ಅಭಿವೃದ್ಧಿಯಾಗಬೇಕೆಂದು ಎಷ್ಟೋ ಸಾಧಿಸಬೇಕೆಂದು ಕೊಳ್ಳುತ್ತಾರೆ. ಅದೇ ತಮ್ಮ ಜೀವನದ ಗಮ್ಯವೆಂದು...ಒಮ್ಮೆ ಜೀವನದಲ್ಲಿ ಮಾಡಬೇಕಾಗಿರುವುದು ಅದೇ ಎಂದು ಭಾವಿಸುವವರೂ, ಇದ್ದಾರೆ.

ಕೆಲವರು ನನ್ನ ಜೀವನದಲ್ಲಿ ಆ ಮೆಡಲ್ ಸಾಧಿಸಿದರೆ ಸಾಕು ಎಂದು ಇನ್ನು ಕೆಲವರು ಆವಾರ್ಡ್ ತೆಗೆದುಕೊಳ್ಳಬೇಕೆಂದು, ಇನ್ನೂ ಕೆಲವರು ರಿವಾರ್ಡ್ ಸಂಪಾದಿಸಬೇಕೆಂದುಕೊಳ್ಳುತ್ತಾರೆ. ಕೆಲವರು ನನ್ನ ಜೀವನದಲ್ಲಿ ಅದೊಂದನ್ನು ಸಾಧಿಸಿದರೆ ಸಾಕು ಇನ್ನೇನು ಬೇಕಿಲ್ಲ ಎನ್ನುತ್ತಾರೆ. ಇನ್ನು ಕೆಲವರು ಸ್ವಂತವಾಗಿ ಒಂದು ಮನೆಯನ್ನು ಕಟ್ಟಿಕೊಂಡರೆ ಸಾಕು ಎನ್ನುತ್ತಾರೆ. ಇನ್ನು ಕೆಲವರು ಈ ಜೀವನದಲ್ಲಿ ಯಾವ ಕೊರತೆಯೂ ಇಲ್ಲದಂತೆ ಜೀವಿಸಿ ಮರಣಿಸಿದರೆ ಸಾಕು ಎಂದುಕೊಳ್ಳುತ್ತಾರೆ.

ಇನ್ನೂ ಕೆಲವರು ನಮ್ಮ ಮಕ್ಕಳಿಗೆ ದಾರಿ ತೋರಿಸಿದರೆ ಸಾಕು ಎಂದು, ಇನ್ನು ಕೆಲವರು ಜೀವನದಲ್ಲಿ ಆ ಪದವಿ ಸಂಪಾದಿಸಿದರೆ ಸಾಕೆಂದುಕೊಳ್ಳುತ್ತಾರೆ ಇನ್ನು ಕೆಲವರು ಈ ಜೀವನದಲ್ಲಿ ಏನಾದರೂ ನೆನಪಿನಲ್ಲಿ ಉಳಿಯುವ ಕೆಲಸ ಮಾಡಿದರೆ ಸಾಕು ಎಂದುಕೊಳ್ಳುತ್ತಾರೆ. ಇನ್ನು ಕೆಲವರು ಈ ಜೀವನದಲ್ಲಿ ಹತ್ತು ಜನರಿಗೆ ಉಪಯೋಗವಾಗುವ ಕೆಲಸಗಳನ್ನು ಮಾಡಿದರೆ ಸಾಕು, ಸೇವೆ ಮಾಡಿದರೆ ಸಾಕು ಎಂದುಕೊಳ್ಳುತ್ತಾರೆ. ಇನ್ನು ಕೆಲವರು ಈ ಜೀವನ ಇರುವುದೇ ಅನುಭವಿಸಲು ಎಂದುಕೊಳ್ಳುತ್ತಾರೆ. ಇನ್ನು ಕೆಲವರು ಆನಂದಕ್ಕಾಗಿ ಈ ಜೀವನ ಎಂದುಕೊಳ್ಳುತ್ತಾರೆ. ಹೀಗೆ ವಿಧವಿಧವಾಗಿ ಅಂದುಕೊಳ್ಳುವವರು, ಹೇಳುವವರು ಇದ್ದಾರೆ.

ಆದರೆ ನಿಜವಾಗಿಯೂ ಈ ಜೀವನ ಏಕೆ? ನೀವು ಅಂದುಕೊಳ್ಳುತ್ತಿರವುದಕ್ಕೆ ಮಾತ್ರವೇ ಎಂದು ಪ್ರಶ್ನಿಸಿದರೆ ಸಮಾಧಾನದಿಂದ ಉತ್ತರ ನೀಡುವವರು ತುಂಬಾ ಕಡಿಮೆ ಮಂದಿ. ಏಕೆ ಈ ಜೀವನ ಎನ್ನುವ ಪ್ರಶ್ನೆಗೆ ಸರಿಯಾದ ಉತ್ತರ ತಿಳಿದುಕೊಳ್ಳಬೇಕೆಂದು, ತುಂಬಾ ಜನರಲ್ಲಿ ಆಸಕ್ತಿ ಇರುತ್ತದೆ. ಆದ್ದರಿಂದ ಈ ಪ್ರಶ್ನೆಗೆ ಉತ್ತರ ತಿಳಿದುಕೊಳ್ಳಲು ಪ್ರಯತ್ನಿಸೋಣ.

ಈ ಪ್ರಶ್ನೆಗೆ ಉತ್ತರ ಕೊಡಬೇಕೆಂದರೆ ಮೊದಲು ನಾವು ಯಾರು ಎಂದು ತಿಳಿದುಕೊಳ್ಳದಿದ್ದರೆ, ಈ ಪ್ರಶ್ನೆಗೆ ಸರಿಯಾದ ಉತ್ತರ ನಮಗೆ ಸಿಗುವುದಿಲ್ಲ. ಕಾರಣ ನಾವು ಯಾರೋ ತಿಳಿದರೆ ಮಾತ್ರ ಜೀವನವೇಕೇ ಎನ್ನುವ ಪ್ರಶ್ನೆಗೆ ಸರಿಯಾದ ಉತ್ತರ ಸಿಗುತ್ತದೆ.

ಹಾಗಾದರೆ ನಾವು ಯಾರು? ಅಂದರೆ "ದೇಹಧಾರಿಗಳು". ಅಂದರೆ ದೇಹಗಳನ್ನು 'ಧರಿಸಿದವರು' ದೇಹವನ್ನು ಧರಿಸಿದ 'ಆತ್ಮಸ್ವರೂಪರು' ನಾವು 'ಆತ್ಮರು' ಅಷ್ಟೇ ಹೊರತು ದೇಹಗಳಲ್ಲ ಎನ್ನುವುದು ಮೊದಲು ತಿಳಿದುಕೊಳ್ಳಬೇಕು.

ಏಕೆಂದರೆ ನಾನು ದೇಹ ಎನ್ನುವ ಅವಗಾಹನೆಯಲ್ಲಿದ್ದರೆ ಈ ಪ್ರಶ್ನೆಗೆ ಸರಿಯಾದ ಉತ್ತರ ದೊರೆಯುವುದಿಲ್ಲ. ನಾನು ಆತ್ಮ ಎನ್ನುವ ಸತ್ಯವನ್ನು ತಿಳಿದಾಗಲೇ ಅವಗಾಹನೆಯಲ್ಲಿ ಇರುವಾಗಲೇ ಈ ಜೀವನವೇಕೆ? ಎನ್ನುವ ಪ್ರಶ್ನೆಗೆ ಸರಿಯಾದ ಉತ್ತರ ಲಭಿಸುತ್ತದೆ. ಕಾರಣ ನಾನು ದೇಹ ಎನ್ನುವ ಭಾವನೆಯಲ್ಲಿರುವವರಿಗೆ ಈ ಜೀವನ ಏಕೆ ಎನ್ನಲು ಪ್ರಾಪಂಚಿಕವಾದ ಉತ್ತರವೇ ದೊರೆಯುತ್ತದೆ. ಪ್ರಾಪಂಚಿಕವಾಗಿ ಆಲೋಚಿಸಿದರೆ ಅದೇ ಪ್ರಶ್ನೆಗೆ ಎಷ್ಟೋ ಉತ್ತರಗಳು ಬರುತ್ತದೆ. ಕೊನೆಗೆ ಯಾವುದು ಸರಿ ಎನ್ನುವುದು ಅರ್ಥವಾಗುವುದಿಲ್ಲ.

ಪ್ರಸ್ತುತ ಹೆಚ್ಚಾಗಿ ಮಾನವರು ನಾನು ದೇಹ ಎನ್ನುವ ಅವಗಾಹನೆಯಲ್ಲಿ ಇದ್ದಾರೆ. ಅದರಿಂದ ಈ ಪ್ರಶ್ನೆಗೆ ಸರಿಯಾದ ಉತ್ತರ ಲಭಿಸುತ್ತಿಲ್ಲ. ಮೇಲಾಗಿ ಒಬ್ಬೊಬ್ಬರು ಒಂದೊಂದು ವಿಧವಾದ ಉತ್ತರವನ್ನು ಹೇಳುತ್ತಾ ಇರುತ್ತಾರೆ.

ಏಕೆಂದರೆ ಈ ಪ್ರಶ್ನೆಗೆ ಉತ್ತರ ಪ್ರಾಪಂಚಿಕ ಜೀವನದಲ್ಲಿ ಜೀವಿಸುವವರಿಗೆ ತಿಳಿಯದಿರಬಹುದು. ಆದರೆ ಆಧ್ಯಾತ್ಮಿಕವಾಗಿ ಜೀವಿಸಿದ ಯೋಗಿಗಳು, ಆತ್ಮಜ್ಞಾನಿಗಳು ಈ ಪ್ರಶ್ನೆಗೆ ಸುಲಭವಾಗಿ ಉತ್ತರ ಹೇಳಬಲ್ಲರು. ಕಾರಣ ಅವರು ಈ ಸೃಷ್ಟಿಯಲ್ಲಿ ಕಾಣಿಸುವ ವಿಷಯಗಳಿಗಿಂತ ಕಾಣಿಸದಿರುವ ವಿಷಯಗಳ ಕುರಿತು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಅಧ್ಯಯನ ಮಾಡಿದ್ದಾರೆ. ಹಾಗಾಗಿ ಅವರ ಬಳಿಯಲ್ಲಿ ಸರಿಯಾದ ಉತ್ತರ ಸಿಗುತ್ತದೆ.

ಅಂತಹ ಆಧ್ಯಾತ್ಮಿಕ ಶಾಸ್ತ್ರಜ್ಞರು ಅಗ್ರಗಣ್ಯರಾದಂತಹ ಶ್ರೀಕೃಷ್ಣನು, ಬುದ್ಧ, ಮಹಾವೀರ, ಶ್ರೀ ಶಂಕರಾಚಾರ್ಯರು, ಗುರುನಾನಕ್, ಜೀಸಸ್, ಮಹಮದ್, ಪತ್ರಿಜಿಯವರು, ವ್ಯಾಸಭಗವಾನರು, ವಸಿಷ್ಠರು, ವಿಶ್ವಾಮಿತ್ರರು, ವಾಲ್ಮೀಕಿ, ಯಾಜ್ಞವಲ್ಕರಂತಹ ಬ್ರಹ್ಮರ್ಷಿಗಳೊಂದಿಗೆ, ಆತ್ಮಜ್ಞಾನಿಗಳಾದ ವಿವೇಕಾನಂದ, ಶ್ರೀ ವೀರಬ್ರಹ್ಮೇಂದ್ರ ಸ್ವಾಮಿ, ಯೋಗಿ ವೇಮನ, ಕಬೀರ್, ಶಿರಡಿ ಬಾಬಾ, ಮೆಹರ್ ಬಾಬಾ, ಸತ್ಯಸಾಯಿ ಬಾಬಾ ರಂತಹವರೆಲ್ಲರೂ ಈ ಪ್ರಶ್ನೆಗೆ ಉತ್ತರ ಹೇಳುವುದಲ್ಲದೆ ನಿಜವಾಗಿ ಮಾನವ ಜೀವನದ ಗುರಿಯನ್ನು ಸಾಧಿಸಬೇಕೆಂದು ಜೀವನ ಗಮ್ಯವನ್ನು ಸೇರಿಕೊಳ್ಳಬೇಕೆಂದು ಬೋಧಿಸಿದ್ದಾರೆ. ಬೋಧಿಸಿರುವುದೇ ಅಲ್ಲದೆ ಆ ಮಾರ್ಗವನ್ನು ಕೂಡ ಅವರು ಮಾನವರಿಗೆ ತಿಳಿಸಿದ್ದಾರೆ.

ಆದ್ದರಿಂದ ಪ್ರಸ್ತುತ ನಾವು ಕೂಡ ಈ ಜೀವನವೇಕೆ ಎನ್ನುವ ಪ್ರಶ್ನೆಗೆ ಉತ್ತರ ತಿಳಿದುಕೊಳ್ಳೋಣ. ಈ ಪ್ರಶ್ನೆಗೆ ಉತ್ತರ ಬೇಕೆಂದರೆ ನಾವು ಮತ್ತಷ್ಟು ಪ್ರಶ್ನೆಗಳನ್ನು

ಹಾಕಿಕೊಳ್ಳಬೇಕು. ಅವುಗಳಿಗೆ ಉತ್ತರ ಕೂಡ ತಿಳಿದುಕೊಳ್ಳಬೇಕು. ಆದ್ದರಿಂದ ಆ ಪ್ರಶ್ನೆಗಳು ಅವುಗಳಿಗೆ ಉತ್ತರಗಳು ಏನು ಎಂದು ಸಹಾ ತಿಳಿದುಕೊಳ್ಳೋಣ. ನಂತರ ಅವುಗಳನ್ನು ವಿಸ್ತಾರವಾಗಿ ವಿಶ್ಲೇಷಿಸಿಕೊಳ್ಳೋಣ.

ಪ್ರ : ಈ ಜೀವನವೇಕೆ?

ಉ : ಮಾಡಿದ ಕರ್ಮಗಳು ಅನುಭವಿಸಲು.

ಇಲ್ಲಿಗೆ ನಿಲ್ಲಿಸಿದರೆ ಸರಿಯಾದ, ಸಂಪೂರ್ಣ ಉತ್ತರವು ಲಭಿಸುವುದಿಲ್ಲ ಆದ್ದರಿಂದ ಮತ್ತಷ್ಟು ಪ್ರಶ್ನೆಗಳನ್ನು ಹಾಕಿಕೊಳ್ಳೋಣ.

ಪ್ರ : ಕರ್ಮಗಳು ಏಕೆ ಅನುಭವಿಸಬೇಕು

ಉ : ಅನುಭವಿಸುತ್ತಾ ಆ ಅನುಭವವನ್ನು ಹೊಂದಲು.

ಪ್ರ : ಅನುಭವ ಏಕೆ ಹೊಂದಬೇಕು?

ಉ : ಜೀವನ ಪಾಠಗಳನ್ನು ಕಲಿತುಕೊಳ್ಳಲು.

ಪ್ರ : ಜೀವನ ಪಾಠಗಳು ಏಕೆ ಕಲಿತುಕೊಳ್ಳಬೇಕು?

ಉ : ಜ್ಞಾನ ಸಂಪಾದಿಸಿಕೊಳ್ಳಲು.

ಪ್ರ : ಜ್ಞಾನವೇಕೆ ಸಂಪಾದಿಸಿಕೊಳ್ಳಬೇಕು?

ಉ : ಆಧ್ಯಾತ್ಮಿಕವಾಗಿ, ಆತ್ಮಪರವಾಗಿ ಅಭಿವೃದ್ಧಿ ಹೊಂದಲು.

ಪ್ರ : ಆತ್ಮಪರವಾಗಿ, ಏಕೆ ಅಭಿವೃದ್ಧಿ ಹೊಂದಬೇಕು?

ಉ : ಜೀವನ ಗಮ್ಯ ಸೇರಲು. ಜೀವನ ಲಕ್ಷ್ಯವನ್ನು ಸಾಧಿಸಲು.

ಪ್ರ : ಜೀವನ ಗಮ್ಯವೇನು?

ಉ : ಜೀವನ ಗಮ್ಯ ಸತ್ಯಲೋಕ ಸೇರುವುದು.

ಪ್ರ : ಜೀವನ ಲಕ್ಷ್ಯವೇನು?

ಉ : ಜೀವನ ಲಕ್ಷ್ಯ ಪೂರ್ಣಾತ್ಮವಾಗಿ ತಯಾರಾಗಿ.. ಬ್ರಹ್ಮವಾಗಲು, ಪರಮಾತ್ಮನಾಗಿ ರಾರಾಜಿಸಲು.

ಮೇಲಿನ ಈ ಪ್ರಶ್ನೋತ್ತರಗಳನ್ನು ನಾವು ವಿವರವಾಗಿ ಆಳವಾಗಿ ವಿಶ್ಲೇಷಿಸಿಕೊಳ್ಳೋಣ. ಮುಖ್ಯವಾಗಿ ನಾವೆಲ್ಲರೂ ಸತ್ಯ ಲೋಕವಾಸಿಗಳಾದ

ಪೂರ್ಣಾತ್ಮನಿಂದ ಅಂದರೆ, ಬ್ರಹ್ಮನಿಂದ ಅಂದರೆ, ಭಗವಂತನಿಂದ ಬೇರ್ಪಟ್ಟ ಅಂಶಗಳು. ಅಂದರೆ ಅಂಶಾತ್ಮರೆಂದು ತಿಳಿದುಕೊಳ್ಳಬೇಕು. ಹಾಗೆ ಅಂಶವಾಗಿ , ಭಾಗವಾಗಿ ಬೇರ್ಪಟ್ಟ ಆತ್ಮಗಳಾದ ನಾವು ಒಂದು ದೇಹದಲ್ಲಿ, ಅಂದರೆ ಜೀವಿಯಲ್ಲಿ ಪ್ರವೇಶಿಸಿದ್ದೇವೆ. ಹಾಗಾಗಿ ಜೀವಾತ್ಮವಾಗಿ ಅಥವಾ ಜೀವನೆಂದು, ಕರೆಯಲ್ಪಡುತ್ತೇವೆ.

ಹಾಗೆ ತಾಯಿಯ ಗರ್ಭದಲ್ಲಿ ತಯಾರಾಗುವ ದೇಹದಲ್ಲಿ ಪ್ರವೇಶಿಸುವ ನಾವು ನವಮಾಸಗಳು ಪೂರ್ತಿಯಾದ ನಂತರ ಜನಿಸುತ್ತೇವೆ. ಮೊಟ್ಟ ಮೊದಲನೆಯ ಬಾರಿ ಜನಿಸಿ ಜೀವನದಲ್ಲಿ ಪ್ರವೇಶಿಸಿದ ನಮಗೆ ಕರ್ಮ ಚಕ್ರ ಆರಂಭವಾಗುತ್ತದೆ. ಅಂದರೆ ಕರ್ಮಗಳು ಮಾಡಲು ಪ್ರಾರಂಭಿಸುತ್ತೇವೆ. ಹಾಗೆ ಬೆಳೆಯುತ್ತಾ ಇರುವ ಹಾಗೆ ಪ್ರತಿದಿನ ಎಷ್ಟೋ ಕರ್ಮಗಳನ್ನು ಮಾಡುತ್ತಾ ಇರುತ್ತೇವೆ. ಹಾಗೆ ಮಾಡುತ್ತಾ ಹೋದ ಕರ್ಮಗಳನ್ನೇ "ವರ್ತಮಾನ" ಕರ್ಮಗಳು ಎನ್ನುತ್ತಾರೆ. ಹಾಗೆ ಮಾಡುತ್ತಾ ಕರ್ಮಗಳು ಅನುಭವಿಸಿ ಅನುಭವಿಸಿ ಉಳಿದ 'ಕರ್ಮ'ಗಳು ನಾವು ಮರಣಿಸಿದ ನಂತರ ಅಂದರೆ. ಶರೀರ ಬಿಟ್ಟಾಗ ನಮ್ಮ ಖಾತೆಯಲ್ಲಿ ಜಮಾ ಮಾಡಲ್ಪಡುತ್ತವೆ. ಜಮೆ ಮಾಡಿದ ಕರ್ಮಗಳನ್ನೇ "ಸಂಚಿತ ಕರ್ಮಗಳು" ಎನ್ನುತ್ತೇವೆ.

ಹಾಗೆ ಸಂಚಿತವಾಗಿರುವ ಕರ್ಮಗಳು ಯಾರಾದರೂ ಅನುಭವಿಸಲೇಬೇಕು! ಆದ್ದರಿಂದ ಆ ಕರ್ಮಗಳು ಅನುಭವಿಸಲು ಅವುಗಳಿಂದ ಕೆಲವು

ಕರ್ಮಗಳು ತೆಗೆದುಕೊಂಡು (ಇವುಗಳನ್ನೇ ಪ್ರಾರಬ್ಧ ಕರ್ಮಗಳು ಎನ್ನುತ್ತಾರೆ ) ಮತ್ತೆ ಜನ್ಮ ಅಂದರೆ ಜೀವನವನ್ನು ತೆಗೆದುಕೊಳ್ಳುತ್ತೇವೆ. ಹಾಗೆ ಜೀವನ ತೆಗೆದುಕೊಂಡು ಆ ಪ್ರಾರಬ್ಧ ಕರ್ಮಗಳು ಅನುಭವಿಸುತ್ತಾ ಇರುತ್ತೇವೆ. ಹಾಗೆ ಅನುಭವಿಸುತ್ತಾ ಮತ್ತೆ ಹೊಸದಾಗಿ ಕರ್ಮಗಳನ್ನು ಮಾಡುತ್ತಿರುತ್ತೇವೆ. ಈ ಕರ್ಮಗಳು ಕೂಡ ಅನುಭವಿ ಸಲೇಬೇಕು. ಅನುಭವಿಸಿ ಉಳಿದು ಮರಣಿಸಿದ ನಂತರ ಹಳೆಯ ಸಂಚಿತ ಕರ್ಮಗಳ ಜೊತೆ ಇವು ಬೆರೆಯುತ್ತವೆ. ಒಟ್ಟಾರೆ ಎಲ್ಲ ಕರ್ಮಗಳೊಳಗಿಂದ ಕೆಲವು "ಪ್ರಾರಬ್ಧಕರ್ಮ" ಗಳೊಂದಿಗೆ ಮತ್ತೆ ಹೊಸ ಜನ್ಮ ತೆಗೆದುಕೊಳ್ಳುತ್ತೇವೆ. ಹಾಗೆ ಜನ್ಮ ಪರಂಪರೆ ಮುಂದುವರೆಯುತ್ತಾ ಇರುತ್ತದೆ. ಹಾಗೆ ಎಲ್ಲಿಯವರೆಗೆ ಈ ಜೀವನ ಮುಂದುವರಿಯುತ್ತದೆ? ಅಂದರೆ ನಮ್ಮ ಖಾತೆಯಲ್ಲಿ ಕರ್ಮಗಳು ಇರುವವರೆಗೂ... ಈ ಜೀವನ ಮುಂದುವರೆಯುತ್ತದೆ. ಕಾರಣ!! ಮಾಡಿದ ಕರ್ಮಗಳು ಅನುಭವಿಸಬೇಕಲ್ಲವೇ.

ಅದಕ್ಕೆ ಹೇಳುವುದು ಈ ಜೀವನವೇಕೆ? ಅಂದರೆ ಮಾಡಿದ ಕರ್ಮಗಳು ಅನುಭವಿಸಲು ಎಂದು ಹೇಳಿಕೊಳ್ಳುತ್ತಿದ್ದೇವೆ.

ನಮಗೆ ಮತ್ತೊಂದು ಸಂದೇಹ ಬರುತ್ತದೆ. ಮಾಡಿದ ಕರ್ಮಗಳು ಏಕೆ ಅನುಭವಿಸಬೇಕು? ಅಂದರೆ ಅನುಭವಿಸುತ್ತಾ ಅನುಭವ ಹೊಂದಲು ಎಂದು ಹೇಳಿಕೊಂಡಿದ್ದೇವೆ ಅಲ್ಲವೇ. ಹಾಗಾಗಿ ಇದರ ಬಗ್ಗೆಯೂ ಸ್ವಲ್ಪ ತಿಳಿದುಕೊಳ್ಳೋಣ.

ಈ ಸೃಷ್ಟಿಯಲ್ಲಿರುವ 84 ಲಕ್ಷ ಜೀವಿಗಳು, ಜೀವರಾಶಿಗಳು ಎಲ್ಲವೂ ಭಗವಂತನಿಂದ ಉದ್ಭವಿಸಿರುವುದೇ ಅದರಿಂದ ಎಲ್ಲವೂ ಭಗವಂತನ ರೂಪಗಳೇ, ಎಲ್ಲರೂ ಒಂದೇ ಎನ್ನುವ ಸತ್ಯವನ್ನು ಮೊದಲು ನಾವು ಅರ್ಥಮಾಡಿಕೊಳ್ಳಬೇಕು. ಇಲ್ಲಿ ಹೆಚ್ಚು ಕಡಿಮೆ ಎಂದು ಯಾರೂ ಇಲ್ಲ. ಎಲ್ಲರೂ ಸಮಾನವೇ ಈ ವಿಷಯವೇ "ಈಶಾವಾಸ್ಯ ಉಪನಿಷತ್ತಿನಲ್ಲಿ ಹೇಳಲಾಗಿದೆ.

**ಶ್ಲೋಕ ॥ "ಈಶಾವಾಶ್ಯಮಿದಂ ಸತ್ಯಂ ಯತ್ಕಿಂಚ ಜಗತ್ಯಾಂ ಜಗತ್**

**ತೇನತ್ಯಕ್ತೇನಾ ಭುಂಜಿಥಾಮಗೃಧ: ಕಸ್ಯಸ್ವಿದ್ಧನಮ್ ।"**

**ತಾತ್ಪರ್ಯ :** ಈ ಸಮಸ್ತ ಸೃಷ್ಟಿಯಲ್ಲಿ ಯಾವ ಚರಾಚರ ಪ್ರಪಂಚವಿದೆಯೋ ಅದೆಲ್ಲವೂ ಭಗವಂತನಿಂದ ವ್ಯಾಪ್ತವಾಗಿರುವ, ಅಂದರೆ ಭಗವಂತನೇ, ಎಲ್ಲಾ ಭಗವಂತನದೇ ಆದ್ದರಿಂದ ಈಶ್ವರಮಯವಾದ ಈ ಪ್ರಪಂಚವನ್ನು ತ್ಯಾಗಭಾವದೊಂದಿಗೆ ಅನುಭವಿಸು. ಯಾರ ಧನವನ್ನು ಆಶಿಸಬೇಡ, ಯಾರನ್ನು ಹಿಂಸಿಸಬೇಡ.



ಈ ವಿಷಯವನ್ನೇ ಭಗವದ್ಗೀತೆಯಲ್ಲಿಯೂ ಹೇಳಲಾಗಿದೆ.

**ಶ್ಲೋಕ ॥ ಅಥವಾ ಬಹುನೈತೇನ ಕಿಂ ಜ್ಞಾತೇನ ತವಾರ್ಜುನ**
**ವಿಷ್ಟಭ್ಯಾಹಾ ಮಿದಂ ಕೃತ್ಸ್ನ ಮೇಕಾಂಶೇನ ಸ್ಥಿತೋ ಜಗತ್॥** **(ಭ.ಗೀ.10–42)**

ತಾ : ಅರ್ಜುನ ವಿಸ್ತಾರವಾದ ಈ ಜ್ಞಾನದಿಂದ ನಿನಗೇನು ಪ್ರಯೋಜನ ಈ ಜಗತ್ತೆಲ್ಲಾ ನಾನೇ ವ್ಯಾಪಿಸಿರುವೆನೆಂದು ತಿಳಿದುಕೋ.. ಎಂದು ಎಲ್ಲವೂ ತಾನೇ ಎಂದು ಹೇಳಲಾಗಿದೆ. ಆತ ಇನ್ನೂ ಮುಂದುವರಿಯುತ್ತಾ,

**ಶ್ಲೋ ॥ ಮಾಯಾ ತತಮಿದಂ ಸರ್ವಂ ಜಗ ದವ್ಯಕ್ತ ಮೂರ್ತಿನಾ**

**ಮತ್ ತಾನೇ ಸರ್ವಭೂತಾನಿ ಮಚ್ಚಾಮ್ ತೇಷ್ವಾವಸ್ಥಿತಃ (ಭ.ಗೀ 9–4 )**

ನಾನು ನನ್ನ ಅವ್ಯಕ್ತ ರೂಪದೊಂದಿಗೆ ಈ ಜಗತ್ತನ್ನು ವ್ಯಾಪಿಸಿದ್ದೇನೆ ಸಮಸ್ತ ಪ್ರಾಣಿ ಕೋಟಿಗಳು ನನ್ನಲ್ಲಿಯೇ ಇವೆ.

ಎಚಿದು ಹೀಗೆ ಹೇಳುತ್ತಾ ತಾನು ಹೇಳಿರುವುದು ನಿರೂಪಿಸಲು ಅರ್ಜುನನಿಗೆ ತನ್ನ ನಿಜವಾದ ರೂಪ ಅಂದರೆ ವಿಶ್ವರೂಪ ತೋರಿಸಲಾಯಿತು.

**ಶ್ಲೋಕ ॥ ಪಶ್ಯ ಮೇ ಪಾರ್ಥ ರೂಪಾಣಿ ಶತಶೋಥ ಸಹಸ್ರಶಃ**

**ನಾನಾವಿಧಾನಿ ದಿವ್ಯಾನಿ ನಾನಾ ವರ್ಣಾಕೃತಿನಿ ಚ ( ಭ.ಗೀ 11–5)**

**ತಾತ್ಪರ್ಯ :** ಓ ಅರ್ಜುನಾ! ಅನೇಕ ವಿಧಗಳಾಗಿರುವ ಅಲೌಕಿಕವಾದ ವಿವಿಧ ವರ್ಣಗಳು, ಆಕಾರಗಳುಳ್ಳ, ಅಸಂಖ್ಯಾತವಾಗಿ ವರ್ತಿಸುವುದಾಗಿರುವ ನನ್ನ ಒಂದು ರೂಪಗಳನ್ನು ನೋಡು.

ಆದ್ದರಿಂದ ಮೊದಲು ಎಲ್ಲಾ ಭಗವತ್ ಸ್ವರೂಪಗಳೇ ಎಲ್ಲಾ ಒಂದೇ ಎಂದು ತಿಳಿದುಕೊಳ್ಳಬೇಕು ಕಾರಣ ಈ ಸೃಷ್ಟಿಯಲ್ಲಿ 84 ಲಕ್ಷ ವಿಧಗಳ ಜೀವಿಗಳು, ಜೀವರಾಶಿಗಳು ಇವೆ. ಎಂದು ಹೇಳುತ್ತಾ ಇರುತ್ತಾರೆ. ಅದರಲ್ಲಿ ವೃಕ್ಷ ಜಾತಿ, ಕ್ರಿಮಿಕೀಟ ಜಾತಿ, ಪಕ್ಷಿ ಜಾತಿ, ಪ್ರಾಣಿ ಜಾತಿ, ಮಾನವ ಜಾತಿಯಂತಹ ಎಷ್ಟೋ ವಿಧಗಳನ್ನು ನಾವು ನೋಡುತ್ತಿರುತ್ತೇವೆ. ಎಲ್ಲವೂ ವಿವಿಧ ರೂಪಗಳೊಂದಿಗೆ ವಿವಿಧ ಆಕಾರಗಳೊಂದಿಗೆ ನಮಗೆ ಕಾಣಿಸುತ್ತವೆ.

ಆದರೆ ಲೋಕದಲ್ಲಿ ಅಂತಹ ವಿವಿಧ ರೂಪಗಳನ್ನು ನೋಡುತ್ತಾ ಎಲ್ಲರೂ ಎಲ್ಲಾ ಬೇರೆ ಬೇರೆ ಎಂದು ಭಾವಿಸುತ್ತಿದ್ದಾರೆ. ಅಷ್ಟೇ ಅಲ್ಲ ತಾನೇ ದೊಡ್ಡವನೆಂದು ಭಾವಿಸುತ್ತಾ ತನ್ನ ಆನಂದಕ್ಕಾಗಿ, ತನ್ನ ಸುಖಕ್ಕಾಗಿ ಇತರರನ್ನು, ಇತರ ಜೀವಿಗಳನ್ನು ಹಿಂಸಿಸುತ್ತಿದ್ದಾರೆ. ಅನೇಕ ವಿಧಗಳಾಗಿ ಬಾಧಿಸುತ್ತಿದ್ದಾರೆ. ಇತರರನ್ನು ಮೋಸ ಗೊಳಿಸುತ್ತಾ, ಅವಮಾನಿಸುತ್ತಾ, ತೊಂದರೆಗೊಳಗಾಗಿಸುತ್ತಾ, ಇತರರ ವಸ್ತುಗಳನ್ನು ಅಪಹರಿಸುತ್ತಾ, ತಮಗೆ ಇಷ್ಟ ಬಂದ ರೀತಿಯಲ್ಲಿ ಅವರು ವರ್ತಿಸುತ್ತಿದ್ದಾರೆ. ಹೀಗೆ ವರ್ತಿಸುತ್ತಿರುವುದರಿಂದ ಅಲ್ಪರು, ಬಲಹೀನರು, ಅಬಲರು, ಬಾಧೆಗೆ ಗುರಿಯಾಗ ಬೇಕಾಗಿರುತ್ತದೆ. ತಮ್ಮ ಆನಂದವನ್ನು ಕಳೆದುಕೊಳ್ಳ ಬೇಕಾಗಿ ಬರುತ್ತದೆ. ಎಲ್ಲಾ ಭಗವತ್ ಸ್ವರೂಪರಾದಾಗ, ಹಾಗೆ ಪ್ರವರ್ತಿಸುವುದು ಇತರರ ಆನಂದವನ್ನು ಭಂಗಪಡಿಸುವುದು ಸೃಷ್ಟಿ ಧರ್ಮಕ್ಕೆ ವಿರುದ್ಧ.



ಈ ಸೃಷ್ಟಿಯಲ್ಲಿ ಪ್ರತಿಯೊಬ್ಬರಿಗೂ ಆನಂದ-ದಿಂದ ಜೀವಿಸುವ ಹಕ್ಕಿದೆ. ಇತರ ಜೀವಿಗಳ ಆನಂದವನ್ನು ಕಸಿಯುವ ಹಕ್ಕು ಯಾರಿಗೂ ಇಲ್ಲ. ಏಕೆಂದರೆ ನೋವು ಎನ್ನುವುದು ಪ್ರತಿ ಜೀವಿಗೂ ಒಂದೇ. ಇದು ಹೇಳಿದರೆ ತಿಳಿಯುವುದಿಲ್ಲ ಅನುಭವಿಸಿದರೆ ತಿಳಿಯುತ್ತದೆ. ಆಗಲೇ ಅರ್ಥವಾಗುತ್ತದೆ, ಪ್ರವರ್ತನೆಯಲ್ಲಿ ಬದಲಾವಣೆ ಬರುತ್ತದೆ. ಏಕೆಂದರೆ, ಒಂದು ಜೀವಿಯ ನೋವು ತಿಳಿದರೆ ಅದಕ್ಕೆ ಹಿಂಸೆ ನೀಡಲಾಗಿದೆ. ಮತ್ತೆ ಅಂತಹ ಕೆಲಸ ಮಾಡಲಾರರು ಆದ್ದರಿಂದ ತಪ್ಪುಗಳು ಮಾಡಿದರೆ ಮತ್ತೆ ಅನುಭವಿಸಬೇಕು. ತಪ್ಪುಗಳು ಮಾಡುವವರಿಗೆ ತಾವು ಮಾಡುವುದು ತಪ್ಪು ಎಂದು ತಿಳಿಯಬೇಕು. ಇಲ್ಲದಿದ್ದರೆ ಅವರು ತಪ್ಪು ಮಾಡುವುದು ಬಿಡುವುದಿಲ್ಲ.

ಹಾಗಾದರೆ ಹೀಗೆ ಬಲಹೀನರ ಮೇಲೆ ದೌರ್ಜನ್ಯ ಏಕೆ ಮಾಡುತ್ತಿದ್ದಾರೆ? ಏಕೆ ಹೀಗೆ ಅಧರ್ಮವಾಗಿ ಪ್ರವರ್ತಿಸುತ್ತಿದ್ದಾರೆ? ಎಂದರೆ ಹಾಗೆ ನೋವು ತಿನ್ನುತ್ತಿರುವವರ



ನೋವು ಹೇಗಿರುತ್ತದೆ ಎಂದು ಇವರಿಗೆ ತಿಳಿದಿಲ್ಲ. ಅಂತಹ ನೋವು ಅವರಿಗೂ ಕಾಣಿಸಿದರೆ, ಆ ಹಿಂಸೆ ಎಷ್ಟು ನರಕ, ಎಷ್ಟು ದುರ್ಭರ ಎನ್ನುವುದು ತನ್ನ ಅನುಭವಕ್ಕೆ ಬಂದರೆ, ಅಂದರೆ ತಾನು ಅನುಭವಿಸಿದರೆ ಮಾತ್ರ ತಿಳಿಯುತ್ತದೆ. ಆಗ ಇತರರನ್ನು ಹಿಂಸಿಸಲು ಹೇಳಿದರು ಆ ಕೆಲಸ ಮಾಡುವುದಿಲ್ಲ 'ನಾನು ಇಷ್ಟು ನೋವು ಅನುಭವಿಸುತ್ತಿದ್ದೇನೆ' ಅವರು ಅಷ್ಟೇ ನೋವು ಅನುಭವಿಸುತ್ತಾರೆ

ಅಲ್ಲವೇ ನನ್ನ ನೋವಿನಂತೆ ಅವರ ನೋವು ಅಲ್ಲವೇ ಎಂದು ಆ ಕೆಲಸ ಮಾಡಲು ಸಂದೇಹಿಸುತ್ತಾರೆ, ಆ ಕೆಲಸ ಮಾಡಲು ಹಿಂತೆಗೆಯುತ್ತಾರೆ. ಇಂತಹ ಬದಲಾವಣೆಯ, ಸ್ವಯಂ ತಾವೇ ಅನುಭವ ಪಡೆದುಕೊಂಡಾಗಲೇ ನಡೆಯುತ್ತದೆ.

ಅದಕ್ಕೆ ನೈಜೀರಿಯಾ ಗಾದೆ ಏನು ಹೇಳುತ್ತದೆ ಎಂದರೆ "ಪಕ್ಷಿಯ ಮರಿಗಳನ್ನು ಚೂಪಾದ ಕಡ್ಡಿಯಿಂದ ಚುಚ್ಚುವ ಮೊದಲು ಅದೆಷ್ಟು ಗಾಯಗೊಳಿಸುವುದೋ ತಿಳಿಯಲು ನಿನ್ನನ್ನು ನೀನು ಚುಚ್ಚಿಕೊಂಡು ನೋಡು " ಎನ್ನುತ್ತದೆ.

ಅಷ್ಟೇ ಹೊರತು ಬಾಯಿಂದ ಸುಮ್ಮನೆ ಬೇರೆಯವರನ್ನು ನಿಂದಿಸಬೇಡ ಮಾತಿನಲ್ಲಿ ಚುಚ್ಚಬೇಡ. ಅವರನ್ನು ಬಾಧಿಸಬೇಡ, ಆ ಪಕ್ಷಿಯನ್ನು ಕೊಲ್ಲಬೇಡ, ಪ್ರಾಣಿಯನ್ನು ತಿನ್ನಬೇಡ ಅದು ನಿನ್ನಂತೆ ನೋವು ಪಡುತ್ತದೆ ಎಂದು ಎಷ್ಟು ಹೇಳಿದರೂ, ಕೇಳುವುದಿಲ್ಲ. ವಿತಂಡವಾದ ಮಾಡುತ್ತಾರೆ. ನನಗೇ ಎಲ್ಲ ತಿಳಿದಿದೆ ಎನ್ನುತ್ತಾರೆ. ಕಾರಣ ಇತರರ, ಇತರ ಜೀವಿಗಳ ನೋವು ಹೇಗಿರುವುದೋ, ಅವರಿಗೆ ಸ್ವಯಂ ಅನುಭವಕ್ಕೆ ಬಂದಿಲ್ಲ. ಬಂದ ನಂತರ ಖಂಡಿತ ಅವರಲ್ಲಿ ಪರಿವರ್ತನೆ ಉಂಟಾಗುತ್ತದೆ, ಬದಲಾವಣೆ ಬರುತ್ತದೆ.

ಉದಾಹರಣೆಗೆ ಯಾರಾದರೂ ಸೇಡಿನಿಂದ ಒಬ್ಬರ ಕಾಲು ಕತ್ತರಿಸಿದ ಎಂದುಕೊಳ್ಳಿ, ಅವರು ಮತ್ತೊಂದು ಜನ್ಮದಲ್ಲಿ ಹುಟ್ಟುವಾಗಲೇ ಅಂಗವೈಕಲ್ಯದಿಂದ ಹುಟ್ಟಬಹುದು. ಪೋಲಿಯೋದಂತಹ ವ್ಯಾಧಿಗಳಿಂದ ಕಾಲು ಶಕ್ತಿಹೀನವಾಗಬಹುದು. ಅಥವಾ ಯಾವುದಾದರೂ ಅಪಘಾತದಲ್ಲಿ ಕಾಲು ಕಳೆದುಕೊಳ್ಳಬಹುದು, ಅಥವಾ ಯಾವುದೋ ಒಂದು ವಿಧದಲ್ಲಿ ಕಾಲು ಇಲ್ಲದಂತೆ ಜೀವಿಸಬೇಕಾಗುತ್ತದೆ. ಹಾಗೆ ಜೀವಿಸುವುದು ಎಷ್ಟು ಕಷ್ಟವೋ! ಎಷ್ಟು ದುರ್ಭರವೋ! ಸ್ವಯಂ ಅನುಭವಿಸುವುದರಿಂದ ಮಾತ್ರ ಆ ಅನುಭವ ಹೊಂದುತ್ತಾನೆ. ಆಗ ಅವನಿಗೆ ಕಾಲು ಇಲ್ಲದ ನೋವು ಹೇಗಿರುತ್ತದೆ ಎಂದು ತಿಳಿಯುತ್ತದೆ. ನಂತರದ ಜನ್ಮಗಳಲ್ಲಿ ಯಾರ ಕಾಲುಗಳನ್ನು ಕತ್ತರಿಸುವುದಿಲ್ಲ. ಯಾರನ್ನು ಅಂತಹ ನೋವಿಗೆ ಗುರಿಮಾಡುವುದಿಲ್ಲ.

ಒಬ್ಬ ಕುರೂಪಿಯನ್ನು ನೋಡಿ, ಮತ್ತೊಬ್ಬಳು ಅಸಹ್ಯಿಸಿಕೊಂಡು, ಅವಮಾನಿಸಿ, ಕೀಳಾಗಿ ನೋಡಿ ನಾನೇ ಅಂದಗಾತಿ ಎಂದು ಗರ್ವಿಸಿ ಅಹಂಕಾರದೊಂದಿಗೆ ಜೀವಿಸಿದರೆ, ಆಕೆ ಮತ್ತೊಂದು ಜನ್ಮದಲ್ಲಿ ಕುರೂಪಿಯಾಗಿ ಜನಿಸಬೇಕಾಗಿರುತ್ತದೆ. ಆ ಜನ್ಮವೆಲ್ಲ ಎಷ್ಟೋ ವಿಧದ ಛೀ ಎಂದು ಅಸಹ್ಯಿಸಿ, ಅಂದವಿಲ್ಲ ಎಂದು ಕೀಳಾಗಿ ನೋಡುವಂತಹ ಅವಮಾನಗಳನ್ನು ಸಹಿಸಬೇಕಾಗಿರುತ್ತದೆ. ಅಂದವಿಲ್ಲದವರ ಜೀವನ ಎಷ್ಟು



ಬಾಧಾಕರವೋ, ಅನುಭವದಿಂದ ಅವರಿಗೆ ತಿಳಿಯುತ್ತದೆ. ನಂತರದ ಜನ್ಮಗಳಲ್ಲಿ ಅಂತಹವರನ್ನು ನೋಡಿದರೂ ಅವಮಾನಿಸುವುದಿಲ್ಲ, ಕೀಳಾಗಿ ಕಾಣುವುದಿಲ್ಲ, ಅಂತಹವರಿಗೆ ನೋವುಂಟು ಮಾಡುವುದಿಲ್ಲ.

ಹಾಗೆಯೇ ಕಡಿಮೆ ಕುಲದವರು ಎಂದು ಹೀಯಾಳಿಸಿದರೆ, ಅವಮಾನಿಸಿದರೆ ಅಂತಹ ಕುಲದಲ್ಲಿ ಜನಿಸಬೇಕಿರುತ್ತದೆ ಇತರ ಮತವನ್ನು ದೂಷಿಸಿದರೆ ಮತ್ತೆ ಅದೇ ಮತದಲ್ಲಿ ಜನಿಸಬೇಕಾಗಿರುತ್ತದೆ. ಇತರ ಪ್ರಾಂತ್ಯವಾಸಿಗಳನ್ನು, ದೇಶವಾಸಿಗಳನ್ನು ವಿಮರ್ಶಿಸಿದರೆ ಅಂತಹ ಪ್ರಾಂತ್ಯದಲ್ಲಿ ಅಂತಹ ದೇಶದಲ್ಲಿ ಜನಿಸಿ ಅಂತಹ ಅನುಭವಗಳನ್ನು ಹೊಂದಬೇಕಾಗಿರುತ್ತದೆ.

ಅನುಭವ ಎಂತಹ ಬದಲಾವಣೆ ತೆಗೆದುಕೊಂಡು ಬರುವುದೋ, ಎಂತಹ ಪಾಠವನ್ನು ಕಲಿಸುವುದೋ, ಎಂದು ಒಂದು ಚಿಕ್ಕ ಉದಾಹರಣೆಯನ್ನು ನೋಡೋಣ.

ತೆವಳಲು ಬಂದ ಯಾವ ಮಗುವಾದರೂ ದೂರದಲ್ಲಿರುವ ಅಗ್ನಿ ಜ್ವಾಲೆ ನೋಡಿ ಅದು ಏನೋ ಎಂದು ಹಿಡಿದುಕೊಳ್ಳಲು, ಆ ಉರಿಯ ಕಡೆಗೆ ಹೋಗುತ್ತಾನೆ ಕಾರಣ ಆ ವಯಸ್ಸಿನಲ್ಲಿ ಯಾವ ವಸ್ತುವಾದರೂ ಕೈಯಲ್ಲಿ ಹಿಡಿದುಕೊಳ್ಳದಿದ್ದರೆ, ಅವನಿಗೆ ತೃಪ್ತಿ ಇರುವುದಿಲ್ಲ. ಹಾಗೆ ಹೋಗುತ್ತಿರುವ ಅವನನ್ನು ಯಾವ ತಾಯಿಯೇ ಆದರೂ ಎಚ್ಚರಿಸುತ್ತಾಳೆ. ಹೋಗಬೇಡ ಎಂದು ತಿಳಿಸಿ ಹೇಳುತ್ತಾಳೆ. ಆದರೂ ಅವನು ಉರಿಯನ್ನು ಇಟ್ಟುಕೊಳ್ಳಲು ಆತುರದಿಂದ ವೇಗವಾಗಿ ಆ ಕಡೆ ಹೋಗುತ್ತಿರುತ್ತಾನೆ. ಆಗ ತಾಯಿ ಎದ್ದು ಬಂದು ಅವನ ಕುಂಡಿಯ ಮೇಲೆ ಮೆಲ್ಲನೆ ಒಂದು ಕೊಟ್ಟು ಹಿಂದಕ್ಕೆ ತರುತ್ತಾಳೆ. ಆದರೆ ತಾಯಿ ನೋಡದಿರುವಾಗ ಆ ಮಗು ಮತ್ತೆ ಅತ್ತ ಕಡೆ ಹೋಗಲು ಪ್ರಯತ್ನಿಸುತ್ತಾನೆ.

ಆದರೆ ಏನಾದರೂ ಆಗಲಿ ಆ ತಾಯಿ ಗಮನಿಸದೆ ಇರುವಾಗ ಅವನು ಆ ಉರಿಯ ಬಳಿ ಹೋಗುತ್ತಾನೆ ಅದರಲ್ಲಿ ಕೈ ಹಾಕುತ್ತಾನೆ. ಕೈ ಸುಟ್ಟ ಮೇಲೆ ಆ ಸುಟ್ಟ ನೋವು ತಾಳಲಾರದೆ ಜೋರಾಗಿ ಅಳುತ್ತಾನೆ. ಆದರೆ ನೋಡಿ ಅವನಿಗೆ ಆ ಗಾಯ ಕಡಿಮೆಯಾದ ಮೇಲೆ ಮತ್ತೆ ಆ ಉರಿ ಕಾಣಿಸಿದರೆ ಹೋಗು ಎಂದು ಕಳುಹಿಸಿದರು ಹೋಗುವುದಿಲ್ಲ. ಆಗ

ಅವನನ್ನು ಎಚ್ಚರಿಸಬೇಕಾದ ಅಗತ್ಯವೂ ಇರುವುದಿಲ್ಲ. ಹಿಂದೆ ಎಳೆದುಕೊಳ್ಳಬೇಕಾದ ಕೆಲಸವೂ ಇಲ್ಲ. ಅದರ ಕಡೆಗೆ ನೂಕಿದರೂ ಹಿಂದೆ ಓಡಿ ಬರುತ್ತಾನೆ .

ಆದರೆ ಇದಕ್ಕೂ ಮುಂಚೆ ಹೋಗಬೇಡ ಎಂದರೆ ಕೇಳಲಿಲ್ಲ ಅವನಿಗೆ ಆಗ ಆ ಅನುಭವ ಆಗಿರಲಿಲ್ಲ. ಈಗ ಹೋಗು ಎಂದರು ಹೋಗುವುದಿಲ್ಲ. ಕಾರಣ ಅನುಭವವಾಗಿದೆ. ಹೀಗೆ ಯಾರನ್ನಾದರೂ ಏನಾದರೂ ಸರಿ ಅನುಭವಕ್ಕೆ ಬಂದರೆ ಅವರ ವರ್ತನೆಯಲ್ಲಿ ಬದಲಾವಣೆ ಬರುತ್ತದೆ. ಚೆನ್ನಾಗಿ ತಿಳಿದುಕೊಳ್ಳುತ್ತಾರೆ, ಅರ್ಥಮಾಡಿಕೊಳ್ಳುತ್ತಾರೆ. ಅಷ್ಟೇ ಹೊರತು ಸುಮ್ಮನೆ ಹೇಳಿದರೆ ಕೇಳುವುದಿಲ್ಲ ಬದಲಾಗುವುದಿಲ್ಲ ತಮ್ಮ ಪ್ರವರ್ತನೆಯನ್ನು ಬದಲಾಯಿಸಿಕೊಳ್ಳುವುದಿಲ್ಲ.

ಹಾಗೆಯೇ ಈ ಸೃಷ್ಟಿಯಲ್ಲಿ ಎಲ್ಲಾ ಒಂದೇ ಎಲ್ಲಾ ನಿನ್ನಂಥವರೇ ನಿನ್ನ ನೋವುಗಳು ಹೇಗೂ ಅವರಿಗೂ ಅಷ್ಟೇ ಎಂದು ಹೇಳಿದರು ಯಾರು ಕೇಳುವುದಿಲ್ಲ, ಬದಲಾಗುವುದಿಲ್ಲ. ಅವರ ಹಿಂಸಾ ಪ್ರವರ್ತನೆ ಬದಲಾಯಿಸಿಕೊಳ್ಳುವುದಿಲ್ಲ. ಆದರೆ ಅನುಭವ ಹೊಂದಿದರೆ ಯಾರು ಹೇಳಬೇಕಾದ ಕೆಲಸವಿರುವುದಿಲ್ಲ ಅರ್ಥಮಾಡಿಕೊಳ್ಳುತ್ತಾರೆ, ತಮ್ಮ ಪ್ರವರ್ತನೆ ಬದಲಾಯಿಸಿಕೊಳ್ಳುತ್ತಾರೆ.

ಉದಾಹರಣೆಗೆ ಜೀವ ಹಿಂಸೆ ಮಾಡಬೇಡ ಮಾಂಸ ತಿನ್ನಬಾರದು ಕೋಳಿಗಳನ್ನು ಪಕ್ಷಿಗಳನ್ನು ಕೊಲ್ಲಬಾರದು, ಪ್ರಾಣಿಗಳನ್ನು ಹಿಂಸಿಸಬಾರದು, ಮೀನುಗಳನ್ನು ಹಿಡಿದು ತಿನ್ನಬಾರದು ಎಂದು ಹೇಳಿದರೆ ಕೇಳುವುದಿಲ್ಲ. ಮೇಲಾಗಿ ಎಷ್ಟೋ ಸಮರ್ಥನೆ ಮಾಡಿಕೊಳ್ಳುತ್ತಾರೆ ವಾದ ಮಾಡುತ್ತಾರೆ.

ಈಗ ಸುಖಪಡದಿದ್ದರೆ ಹೇಗೆ? ಸುಖ ಪಡಲು ಸಂಪಾದಿಸುವುದಲ್ಲವೇ? ಎಂದು ಕೆಲವರು ಮಾಂಸ ತಿನ್ನದಿದ್ದರೆ ಶಕ್ತಿ ಬರುತ್ತದೆಯೇ? ಕೆಲಸಗಳು ಎಲ್ಲಾ ಹೇಗೆ ಮಾಡಿಕೊಳ್ಳುತ್ತೇವೆ? ಎಂದು, ಕೆಲವರು ಆ ರುಚಿ ಹೇಗಿರುತ್ತದೆ ಏನು ಎಂದು ನಿಮಗೆ ತಿಳಿದಿದೆಯೇ , ತಿಂದರೆ ತಿಳಿಯುತ್ತದೆ ಎಂದು ಕೆಲವರು, ಆ ಹಸಿರು ಸೊಪ್ಪಿನಲ್ಲಿ ಏನಿದೆ ಪಲಾವ್ನಲ್ಲಿ ಎಲ್ಲಾ ರುಚಿ ಇದೆ. ಹಬ್ಬಕ್ಕೆ ಬಂದರೆ ಬರಿ ಬೇಳೆ ಸಾರು ಮಾಡುವೆಯ ಎಂದು ಅಣಕಿಸುವವರು ಕೆಲವರು ಇದ್ದಾರೆ .

ಹಾಗೆ ಅವುಗಳೆಲ್ಲವನ್ನು ಭಗವಂತ ನಮಗಾಗಿ ಸೃಷ್ಟಿಸಿದ್ದಾನೆ. ನಾವು ಅನುಭವಿಸಲು ಅವು ಇವೆ ಎಂದು ಕೆಲವರು ಹೇಳುತ್ತಾರೆ. ನಾವು ತಿನ್ನದಿದ್ದರೆ ಅವು

ಹೆಚ್ಚಾಗುವುದಿಲ್ಲವೆ?ಎಂದು ಪ್ರಶ್ನಿಸುತ್ತಾರೆ. ಕೆಲವರು ತೋಟದಲ್ಲಿ ಬೆಳೆಯುವ ಸೊಪ್ಪು ತರಕಾರಿಗಳಲ್ಲಿ ಪ್ರಾಣ ಇರುವುದಿಲ್ಲವೇ ಮತ್ತೆ ಅವುಗಳನ್ನು ತಿಂದರೆ ಪಾಪವಿಲ್ಲ ಎಂದಾದರೆ; ಮಾಂಸ ತಿಂದರೆ ಪಾಪ ಹೇಗೆ ಬರುತ್ತದೆ ಎಂದು ಕೆಲವರು ಕೇಳುತ್ತಾರೆ.

ಈಗ ತಿನ್ನುತ್ತಿದ್ದೇವೆಯೇ? ಯಾವುದೋ ಕಾಲದಿಂದ ಎಲ್ಲರೂ ತಿನ್ನುತ್ತಿದ್ದಾರೆ. ಎಲ್ಲಿ ನೋಡಿದರೂ ಎಲ್ಲರೂ, ಮಾಂಸಾಹಾರ ತಿನ್ನುವುದಲ್ಲವೇ . ಅದು ತಪ್ಪು ಎಂದಾದರೆ ಎಲ್ಲರೂ ಏಕೆ ತಿನ್ನುತ್ತಿದ್ದಾರೆ? ಎಂದು ಕೆಲವರು ಕೇಳುತ್ತಾರೆ .ಶಿರಡಿ ಸಾಯಿಬಾಬಾ ಮಾಂಸ ಬೇಯಿಸುತ್ತಿದ್ದರಂತೆ! ಭಕ್ತ ಕಣ್ಣಪ್ಪ ಮಾಂಸವನ್ನು ನೈವೇದ್ಯವನ್ನಾಗಿ ಇಡುತ್ತಿದ್ದನಂತೆ, ಕುರಾನ್ ನಲ್ಲಿ ಮಾಂಸ ತಿನ್ನಬೇಕು ಎಂದು ಇದೆಯಂತೆ, ಜೀಸಸ್ ಮೀನುಗಳನ್ನು ಹಿಡಿಯುತ್ತಿದ್ದರಂತೆ... ಎಂದು ಹೀಗೆ ಹಲವಾರು ರೀತಿಯಲ್ಲಿ ಪ್ರಶ್ನೆಗಳನ್ನು ಹಾಕುತ್ತಾರೆ.

ಹೀಗೆ ಅನೇಕ ಕಾರಣಗಳನ್ನು ಹೇಳುತ್ತಾ, ಪ್ರಶ್ನೆಗಳನ್ನು ಹಾಕುತ್ತಾ ಮಾಂಸ ತಿನ್ನುವವರು ತುಂಬಾ ಜನರಿದ್ದಾರೆ.

ಹಾಗೆ ಮಾಂಸ ತಿನ್ನುತ್ತಾ ಪರೋಕ್ಷವಾಗಿ ಹಿಂಸೆಗೆ ಕಾರಣರಾಗುತ್ತಿದ್ದಾರೆ. ಆದರೆ ಸೃಷ್ಟಿ ಧರ್ಮದ ಪ್ರಕಾರ ಹಿಂಸೆ ಪಾಪ. ಪಾಪಕ್ಕೆ ತಕ್ಕ ಫಲಿತಾ ಅನುಭವಿಸಬೇಕಾಗಿರುತ್ತದೆ.

ಪಾಪದ ಫಲಿತ ರೋಗಗಳ ರೂಪದಲ್ಲಿ ಅನುಭವಿಸುವಾಗ ತುಂಬಾ ಬಾಧಾಕರವಾಗಿರುತ್ತದೆ. ಅದು ನರಕದೊಂದಿಗೆ ಸಮಾನ ಎಂದು ತಿಳಿದುಕೊಳ್ಳಬೇಕು.



ಅದಕ್ಕೆ ಬುದ್ಧ ಭಗವಾನರು ಈ ವಿಧವಾಗಿ ಹೇಳಿದ್ದಾರೆ.

"**ಪಾಪ ಮಾಡುವಾಗ ಯಾರಿಗಾದರೂ ಸುಖಭ್ರಾಂತಿ ಇರುತ್ತದೆ. ಆದರೆ ಆ ಪಾಪ ಫಲಿತ ಅನುಭವಿಸುವಾಗ ಮಾತ್ರ ಜೀವನ ಬಲು ದುರ್ಭರವಾಗಿರುತ್ತದೆ**" ಎಂದು ಹೇಳಿದ್ದಾರೆ.

ಹಾಗಾದರೆ ದುರ್ಬರವಾದ ಬಾಧೆಯನ್ನು ಕೊಡುವ ಪಾಪ ಏಕೆ ಮಾಡುತ್ತಿದ್ದಾರೆ? ಎಂದರೆ,

ಅವರು ಆ ಅನುಭವವನ್ನು ಇನ್ನೂ ಹೊಂದಿಲ್ಲ. ಅದಕ್ಕೆ ಪಾಪ ಎಂದು ಹೇಳಿದರು, ಆ ಪಾಪಗಳನ್ನು ಮಾಡುತ್ತಿದ್ದಾರೆ.

ಅಷ್ಟೇ ಅಲ್ಲ ಪಾಪಗಳು ಮಾಡಿದರೆ ಕಷ್ಟಗಳು ಬರುತ್ತವೆ ಎಂದು, ಜೀವನಕಡೆ ದುರ್ಬರವಾಗುತ್ತದೆ ಎಂದು ಪ್ರತಿಯೊಬ್ಬರಿಗೂ ತಿಳಿದಿದೆ. ತಾವು ಮಾಡಿದ ಪಾಪಗಳನ್ನು ಕ್ಷಮಿಸಬೇಕೆಂದು ದೇವರನ್ನು ಪ್ರಾರ್ಥಿಸುತ್ತಿದ್ದಾರೆ, ಬೇಡಿಕೊಳ್ಳುತ್ತಿದ್ದಾರೆ. ಪಾಪಗಳು ಹೋಗುತ್ತವೆ ಎಂದು ಯಾರಾದರೂ ಹೇಳಿದರೆ ಯಾವ ಕೆಲಸವನ್ನಾದರೂ ಮಾಡುತ್ತಾರೆ. ನದಿಯಲ್ಲಿ ಮುಳುಗುತ್ತಾರೆ, ಪುಣ್ಯಕ್ಷೇತ್ರಗಳನ್ನು ದರ್ಶಿಸುತ್ತಿದ್ದಾರೆ, ಇನ್ನೂ ಅನೇಕ ಕೆಲಸಗಳನ್ನು ಮಾಡುತ್ತಿದ್ದಾರೆ.

ಯಾವ ಮತದವರಾದರು ಆಲಯಗಳಿಗೆ ಹೋಗಿ ಅವರ ಆಚಾರದ ಪ್ರಕಾರ ಪೂಜೆ, ಪ್ರಾರ್ಥನೆ, ನಮಾಜು, ಆರಾಧನೆಗಳನ್ನು ಮಾಡಿ ಪಾಪಗಳು ಕ್ಷಮಿಸಬೇಕೆಂದು ಕೋರುತ್ತಾರೆಂದರೆ, ಅವರು ಪಾಪಗಳು ಮಾಡಿದಂತೆ ತಾನೇ... ಅದನ್ನು ತಾವು ಒಪ್ಪಿಕೊಳ್ಳುತ್ತಿರುವಂತೆ ಅಲ್ಲವೇ!? ಪಾಪಗಳು ಮಾಡದಿದ್ದರೆ ಕ್ಷಮಿಸಬೇಕೆಂದು ಕೋರುವುದೇಕೆ? ಪ್ರಾರ್ಥಿಸುವುದೇಕೆ? ಅಲ್ಲವೇ!

ಇವೆಲ್ಲವನ್ನು ಮಾಡುತ್ತಿದ್ದಾರೆ ಎಂದರೆ ಪಾಪಗಳನ್ನು ಮಾಡಿದ್ದೇವೆ ಎಂದು ಒಪ್ಪಿಕೊಂಡಂತೆ. ಅಷ್ಟೇ ಅಲ್ಲದೆ ಪಾಪದಿಂದ ಕಷ್ಟಗಳು ಬರುತ್ತಿವೆ ಎಂದು ಕೂಡ ಅವರಿಗೆ ತಿಳಿದಿದೆ. ಆ ಕಷ್ಟಗಳನ್ನು ಸಹಿಸಲಾರವೆಂದು ಅವು ತುಂಬಾ ಬಾಧಾಕರವಾದದ್ದೆಂದು ತಿಳಿದಿದೆ. ಆದ್ದರಿಂದಲೇ ಕ್ಷಮಿಸಲು ಬೇಡುತ್ತಿದ್ದಾರೆ.

ಮತ್ತೆ ತಿಳಿದು ಕೂಡಾ ಏಕೆ ಪಾಪಗಳನ್ನು ಮಾಡುತ್ತಿದ್ದಾರೆ? ಇತರರನ್ನು ಇತರ ಜೀವಿಗಳನ್ನು ಏಕೆ ಹಿಂಸಿಸುತ್ತಿದ್ದಾರೆ? ಇತರರನ್ನು ಏಕೆ ಮೋಸಗೊಳಿಸುತ್ತಿದ್ದಾರೆ? ನಷ್ಟಕ್ಕೆ ಒಳಪಡಿಸುತ್ತಿದ್ದಾರೆ, ಕಷ್ಟಗಳಿಗೆ ಗುರಿ ಮಾಡುತ್ತಿದ್ದಾರೆ, ಇತರರಿಗೆ ಕೊಡಬಾರದ ಕಷ್ಟಗಳನ್ನು ಏಕೆ ಕೊಡುತ್ತಿದ್ದಾರೆ? ಅಧರ್ಮವಾಗಿ ಏಕೆ ವ್ಯವಹರಿಸುತ್ತಿದ್ದಾರೆ? ಸೃಷ್ಟಿಗೆ ವಿರುದ್ಧವಾದ ಕೆಲಸಗಳನ್ನು ಏಕೆ ಮಾಡುತ್ತಿದ್ದಾರೆ? ಹಾಗೆ ಮಾಡುತ್ತಾ ಜೀವನವನ್ನು ಏಕೆ ನರಕಪ್ರಾಯ ಮಾಡಿಕೊಳ್ಳುತ್ತಿದ್ದಾರೆ?

ಅಂದರೆ ಎಲ್ಲಾ ತಿಳಿದರೂ, ಅನುಭವವಾಗಿಲ್ಲ. ಆದ್ದರಿಂದ ಅವರಿಗೆ ಆ ಕೆಲಸಗಳು ಬಿಡಲು ಆಗುತ್ತಿಲ್ಲ. ಅದರ ಮೂಲಕ ಕಷ್ಟಗಳನ್ನು ತಂದುಕೊಳ್ಳುತ್ತಿದ್ದಾರೆ.

ಉದಾಹರಣೆಗೆ ಹಣ ಅಪಹರಿಸಬಾರದು ಎಂದು ಹಿರಿಯರು ಹೇಳುತ್ತಿರುತ್ತಾರೆ. ಇದನ್ನು ಕೇಳಿದರೂ ಕೂಡ ಅವನಿಗೆ ಅರ್ಥವಾಗುವುದಿಲ್ಲ ಹಣಕ್ಕಾಗಿ ಯಾರ ಜೇಬನ್ನು ಕತ್ತರಿಸುವುದು, ಯಾರ ಕತ್ತಿನಲ್ಲಿರುವ ಸರವನ್ನು ಕಳ್ಳತನ ಮಾಡುವುದು, ಯಾರ ಬೈಕ್, ಸೆಲ್, ಕಾರ್‌ಗಳನ್ನು ಅಪಹರಿಸುವುದು. ಮಾಡುತ್ತಾರೆ ಆ ಕೃತ್ಯಗಳನ್ನು ಮಾಡುವಾಗ ಯಾರ ಕೈಯ್ಯಲ್ಲಾದರೂ ಸಿಗದಿದ್ದರೆ ಚೆನ್ನಾಗಿ ಇರುತ್ತದೆ. ಅವನ ಪಾಪ ಹಣ್ಣಾಗಿ ಯಾರಿಗಾದರೂ ಸಿಕ್ಕರೆ ಹಿಡಿದುಕೊಂಡು ಎಲ್ಲರೂ ಮೈ ಹುಣ್ಣಾಗುವಂತೆ ಬಡಿಯುತ್ತಾರೆ. ಕಳ್ಳ ಕಳ್ಳ ಎಂದು ಅವಹೇಳನ ಮಾಡುತ್ತಾರೆ, ಬಯ್ಯುತ್ತಾರೆ, ನೀಚವಾಗಿ ನೋಡುತ್ತಾರೆ., ಪೋಲಿಸರಿಗೆ ಸಿಕ್ಕಿದರೆ ಕಠಿಣವಾದ ಶಿಕ್ಷೆಗಳು ಬೀಳುತ್ತದೆ.

ಹಾಗಾದಾಗ ಅವನಿಗೆ ಅದು ಎಷ್ಟು ಅವಮಾನಕರ, ಬಾದಾಕರ ಎಂದು ತಿಳಿಯುತ್ತದೆ. ಅದನ್ನು ಸಹಿಸಲಾರದೆ ಇನ್ನೂ ಇಂತಹ ಕೆಲಸ ಮಾಡಬಾರದೆಂದು ನಿರ್ಣಯಿಸಿಕೊಳ್ಳುತ್ತಾನೆ. ಮತ್ತೆ ಮಾಡುವುದು ಇಲ್ಲ. ಕಾರಣ ಅನುಭವವಾಗಿದೆ. ಅನುಭವ ಹೊಂದಿದವರು ಜೀವನ ಎಷ್ಟೇ ಕಷ್ಟವಾದರೂ ಅಂತಹ ತಪ್ಪುಗಳನ್ನು ಮಾಡುವುದಿಲ್ಲ. ಕಾರಣ ಸ್ವಾನುಭವವಾಗಿದೆ. ಒಂದು ವೇಳೆ ಮಾಡಬೇಕೆಂದುಕೊಂಡರು ಕೂಡಲೇ ಅನುಭವ ನೆನಪಿಗೆ ಬರುತ್ತದೆ. ಏಕೆ ಬೇಕು ಎಂದು ಆಲೋಚಿಸಿ ಸುಮ್ಮನಾಗುತ್ತಾರೆ. ಇದು ಯಾರು ಹೇಳಿದರು ತಿಳಿಯುವುದಿಲ್ಲ ಆದರೆ ಅನುಭವವಾದರೆ ಮಾತ್ರ ಅದನ್ನು ಮತ್ತೆ ಮಾಡುವುದಿಲ್ಲ.

ಹೀಗೆ ಪ್ರತಿ ಜನ್ಮದಲ್ಲಿ ಯಾವುದೋ ಒಂದು ಅನುಭವಗಳನ್ನು ಹೊಂದುತ್ತಾ ಇರುತ್ತಾರೆ ಅವೆಲ್ಲವೂ ಆತ್ಮದಲ್ಲೂ ನಿಕ್ಷಿಪ್ತವಾಗಿರುತ್ತದೆ ಅದಕ್ಕೆ ಅಂತಹ ತಪ್ಪು ಮಾಡಬೇಕೆಂದರೆ ಕೂಡಲೇ ಒಳಗಿನಿಂದ ಮಾಡಬಾರದು. ತಪ್ಪು ಎಂದು ಅನಿಸುತ್ತದೆ. ಆದ್ದರಿಂದ ಪೂರ್ವ ಅನುಭವದಿಂದ, ತಪ್ಪುಗಳನ್ನು ಮಾಡಲು ಹೇಳಿದರು ಮಾಡುವುದಿಲ್ಲ. ಕೆಲವರು ಮಾಡಬೇಕೆಂದುಕೊಂಡರು ಅವರಿಗೆ ಮಾಡಲು ಮನಸ್ಸಾಗುವುದಿಲ್ಲ. ಕೆಲವರು ಸುತ್ತಲೂ ಇರುವ ಸಮಾಜ ಪ್ರಭಾವದಿಂದ ಆ ತಪ್ಪನ್ನು ಮಾಡ್ತಾ ಇದ್ದರು ಅಂದರೆ ಮಾಂಸ ತಿನ್ನುತ್ತಿದ್ದರು ಯಾರಾದರೂ ಅದು ತಪ್ಪು, ಪಾಪ ಎಂದು ಹೇಳಿದ ಕೂಡಲೇ ಮಾಂಸಹಾರ ಬಿಡುತ್ತಾರೆ. ಆದರೆ ಕೆಲವರು ಎಷ್ಟು ಹೇಳಿದರು ಎಷ್ಟು ಬಾರಿ ಹೇಳಿದರೂ ಬಿಡುವುದಿಲ್ಲ. ಕಾರಣ ಅವರಿಗೆ ಅನುಭವ ಆಗಿಲ್ಲ.

ಇಲ್ಲಿ ಅನುಭವಗಳು ಎರಡು ವಿಧ ಒಂದು ಪ್ರತ್ಯಕ್ಷ, ಎರಡನೇದು ಪರೋಕ್ಷ ಅನುಭವ. ಪ್ರತ್ಯಕ್ಷ ಅನುಭವ ಎಂದರೆ ಪಾಪ ಮಾಡಿದ ಕೂಡಲೇ ಬೀಳುವ ಶಿಕ್ಷೆ. ಇದು ಎಲ್ಲಿ ಪ್ರಭಾವ ತೋರಿಸುತ್ತದೆ ಎಂದರೆ ಆ ಕೆಲಸ ಮಾಡಿದ್ದರಿಂದಲೇ ಶಿಕ್ಷೆ ಬಂದಿದೆ ಎನ್ನುವುದನ್ನು ನೋಡಿರುತ್ತಾರೆ.

ಆದರೆ ಪರೋಕ್ಷ ಅನುಭವ ಎಂದರೆ ಈಗ ಮಾಂಸ ತಿಂದಿದ್ದೀರಾ ಏನು ಆಗಿಲ್ಲ. ಆದರೆ ಈ ಪಾಪ ಕಾರಣವಾಗಿ ಭವಿಷ್ಯತ್ತಿನಲ್ಲಿ ಅಪಘಾತವಾಗಬಹುದು, ಯಾವುದಾದರೂ ತೀವ್ರ ರೋಗದಲ್ಲಿ ಬೀಳಬಹುದು. ಆದರೆ ಆ ಕಷ್ಟವು ಮಾಂಸ ತಿನ್ನುವುದರಿಂದ ಬಂದಿದೆ ಎನ್ನುವುದು ಅವರಿಗೆ ತಿಳಿಯುವುದಿಲ್ಲ. ಆದ್ದರಿಂದ ಅವರು ಅದಕ್ಕೆ ಬೇರೆ ಕಾರಣ ಹೇಳುತ್ತಾರೆ. ಆ ಕಷ್ಟ ಹೋದ ಕೂಡಲೇ ಮತ್ತೆ ಆ ಪಾಪ ಮಾಡುತ್ತಿರುತ್ತಾರೆ. ಮಾಂಸ ತಿನ್ನುತ್ತಾರೆ. ಏಕೆಂದರೆ ತಾನು ಹೊಂದಿದ್ದು ಪರೋಕ್ಷ ಅನುಭವ.

ಒಂದು ವೇಳೆ ಬುದ್ಧ, ಶ್ರೀಕೃಷ್ಣ, ಪತ್ರೀಜಿ ಅಂತವರು ನಿನ್ನ ಹಿಂಸಾತ್ಮಕವಾದ ಪಾಪಗಳೆ ನಿನ್ನ ರೋಗಗಳು ಎಂದು ಹೇಳಿದರೂ, ಮನಸ್ಸಿನಲ್ಲಿ ಹೌದೇನೋ, ಇರಬಹುದು ಎನಿಸುತ್ತದೆ ಅಷ್ಟೇ, ಆದರೆ ಅದನ್ನು ಬಿಡುವುದಿಲ್ಲ. ಏಕೆಂದರೆ ತಾನು ಹೊಂದಿದ್ದು ಪರೋಕ್ಷ ಅನುಭವ.

ಆದರೆ ಸೃಷ್ಟಿಯಲಿನ 'ಕರ್ಮ ಸಿದ್ಧಾಂತದ' ಅನುಸಾರ ಅಂತಹ ಪರೋಕ್ಷ ಅನುಭವಗಳು ಹೊಂದುತ್ತಾ ಹೊಂದುತ್ತಾ ಕೆಲವು ದಿನಗಳಿಗೆ ಅಂತರ್ಮಥನ ಆರಂಭವಾಗುತ್ತದೆ ಏಕೆ ಕಷ್ಟ ಬಂದಿದೆ? ಏತಕ್ಕಾಗಿ ಹೀಗೆ ನಡೆಯುತ್ತಿದೆ? ನಾನೇನೋ ತಪ್ಪು ಮಾಡಿಲ್ಲ! ನನಗ್ಯಾವ ಪಾಪ ತಿಳಿದಿಲ್ಲ! ನನಗೆ ಏಕೆ ಈ ಕಷ್ಟ ಬಂದಿದೆ? ಒಂದು ವೇಳೆ ಆ ಹಿರಿಯರು ಹೇಳಿದ್ದು ನಿಜವೇ! ಮಾಂಸ ತಿನ್ನುವುದರಿಂದಲೇ ಈ ಕಷ್ಟ ಬಂದಿದೆ ಇಲ್ಲದಿದ್ದರೆ ಅವರು ಈ ವಿಷಯ ಏಕೆ ಹೇಳುತ್ತಾರೆ? ನನಗೆ ಏಕೆ ಹೇಳುತ್ತಾರೆ? ಹಾಗೆ ಹೇಳುವುದರಿಂದ ಅವರಿಗೆ ಬರುವ ಲಾಭವೇನು? ಅದೇ ಕಾರಣವಾದರೆ ತಿನ್ನದಿದ್ದರೆ ನಷ್ಟವೇನು? ಮಾಂಸಾಹಾರ ತ್ಯಜಿಸಿದರೆ ಆಗುವುದಿಲ್ಲವೇ? ಅದರ ಬದಲಾಗಿ ಏನು ಯಾವುದೋ ಒಂದು ಆಹಾರ ಸಿಗುತ್ತದೆಯಲ್ಲವೇ... ಪ್ರಾಣಿಗಳನ್ನೇ ಏಕೆ ತಿನ್ನಬೇಕು ನಿಜವಾಗಿ ನೋಡಿದರೆ ಅವು ಕೂಡ ನೋವು ಪಡುತ್ತದೆಯಲ್ಲವೇ? ಅವುಗಳ ನೋವು ಕೂಡ ನನಗೆ ಆಗುವ ನೋವಿನಂತೆ ಅಲ್ಲವೇ! ಅದಕ್ಕೆ ಪ್ರಾಣ ಇದೆ ಕೊಲ್ಲುವಾಗ ಬೇಡ ಬೇಡ ಎಂದು ಕಿರುಚುತ್ತದೆ ಅಲ್ಲವೇ.. ಅಳುತ್ತದೆ ಓಡಿ ಹೋಗಲು ಪ್ರಯತ್ನಿಸುತ್ತದೆ. ಹಾಗೆ ಮಾಡಿದ್ದು ಅದಕ್ಕೆ ಆಗುವ ನೋವಿನಿಂದಲ್ಲವೇ...

ನನ್ನ ಕೈಗೆ ಗಾಯವಾದರೆ ಎಂತಹ ನೋವಾಗುವುದೋ, ಅದರ ಕತ್ತನ್ನು ಕತ್ತರಿಸಿದರೆ ಅದಕ್ಕೂ ಅಂತಹ ನೋವು ಆಗುವುದಲ್ಲವೇ?! ವಿನಾಕಾರಣ ಅದನ್ನ ನೋವಿಗೆ ಒಳಪಡಿಸುವುದೇಕೆ ಆ ಪಾಪ ಪಲಿತವಾಗಿ ನಾನು ಬಾಧೆ ಗೊಳಗಾಗುವುದೇಕೆ ತಿನ್ನದೇ ಇದ್ದರೆ ಏನಾಗುತ್ತದೆ? ಎಂದು ವಿಧವಿಧವಾಗಿ ಆಲೋಚಿಸುತ್ತಾರೆ.

ಹಾಗೆ ಕಷ್ಟ ಉಂಟಾದಾಗ ರೋಗದೊಂದಿಗೆ ಬಾಧೆಗೊಳಗಾಗುತ್ತಿದ್ದಾಗ, ನೋವು ಅನುಭವಿಸುತ್ತಿದ್ದಾಗ, ಸಹಿಸಲಾರದಿರುವಾಗ ಅಂತರ್ಮಥನದ ಮೂಲಕ ಪರೋಕ್ಷ ಕಾರಣವನ್ನು ತಿಳಿದುಕೊಳ್ಳುತ್ತಾರೆ. ಇನ್ನು ಆ ಕೆಲಸ ಮಾಡುವುದಿಲ್ಲ. ಪ್ರವರ್ತನೆ ಬದಲಾಯಿಸಿಕೊಳ್ಳುತ್ತಾನೆ /ಳೆ. ಇದೆಲ್ಲವೂ ಪರೋಕ್ಷ ಅನುಭವದಿಂದ ಆಣುತ್ತದೆ.

ಯಾವುದೇನಾದರೂ ಕಷ್ಟಗಳು ಅನುಭವಕ್ಕಾಗಿಯೇ ಬರುತ್ತವೆ. ಅನುಭವ ಹೊಂದಿದವರು ಮತ್ತೆ ತಪ್ಪುಗಳನ್ನು ಮಾಡುವುದಿಲ್ಲ. ಒಂದು ವೇಳೆ ತಪ್ಪು ಮಾಡುತ್ತಿದ್ದಾರೆ ಎಂದರೆ ಇನ್ನೂ ಅನುಭವ ಹೊಂದಿಲ್ಲ ಎಂದು ಅರ್ಥ.

ಏನಾದರೂ ಮಾಡಿದ ಕರ್ಮಗಳು ಏಕೆ ಅನುಭವಿಸಬೇಕು? ಎಂದರೆ ಅನುಭವಗಳನ್ನು ಹೊಂದಲು, ಬದಲಾವಣೆ ಆಗಲು ಸೃಷ್ಟಿಯಲ್ಲಿನ ಸತ್ಯ ತಿಳಿದುಕೊಳ್ಳಲು. ಎಲ್ಲಾ ಒಂದೇ ಎಲ್ಲವೂ ಒಂದೇ ಎಂದು ತಿಳಿದುಕೊಳ್ಳಲು. ಎಲ್ಲರೂ ನನ್ನ ಹಾಗೆ ಆತ್ಮ ಸ್ವರೂಪ ಎಂದು ತಿಳಿದುಕೊಳ್ಳಲು. ಎಲ್ಲರನ್ನು ತನ್ನ ಹಾಗೆ ಎಂದು ಸಮಾನವಾಗಿ ನೋಡಲು.

ಅನುಭವ ಹೊಂದದಿದ್ದರೆ ತಪ್ಪುಗಳು ಮಾಡುತ್ತಲೇ ಇರುತ್ತಾರೆ. ಇತರರಿಗೆ ಹಾನಿ ಮಾಡುತ್ತಾ ಇರುತ್ತಾರೆ. ಪ್ರವರ್ತನೆಯಲ್ಲಿ ಬದಲಾವಣೆ ಇರುವುದಿಲ್ಲ ಪಾಪಗಳನ್ನು ಮಾಡುತ್ತಾ ಇರುತ್ತಾರೆ. ಅಧರ್ಮವಾದ ಕೆಲಸಗಳನ್ನು ಮಾಡುತ್ತಿರುತ್ತಾರೆ. ಸೃಷ್ಟಿಗೆ ವಿರುದ್ಧವಾದ ಕೆಲಸಗಳನ್ನು ಮಾಡುತ್ತಿರುತ್ತಾರೆ.

ಈ ಅನುಭವಗಳು ಏಕೆ? ಎಂದರೆ ಪಾಠಗಳನ್ನು ಕಲಿಯಲು ಎಂದು ತಿಳಿದುಕೊಂಡೆವು. ಹಾಗೆ ಒಂದೊಂದು ಅನುಭವದ ಮೂಲಕ ಒಂದೊಂದು ಪಾಠ ಕಲಿತುಕೊಳ್ಳುತ್ತಾರೆ. ಒಂದೊಂದು ಪಾಠದ ಮೂಲಕ ಒಂದೊಂದೇ ತಪ್ಪನ್ನು ಸರಿ ಮಾಡಿಕೊಳ್ಳುತ್ತಾರೆ. ಹೀಗೆ ಎಷ್ಟೋ ಜನ್ಮಗಳಲ್ಲಿ ತಿಳಿದುಕೊಂಡು ಎಷ್ಟೋ ಪಾಠಗಳನ್ನು ಕಲಿತು ಎಷ್ಟೋ ತಪ್ಪುಗಳನ್ನು ಸರಿಪಡಿಸಿಕೊಳ್ಳುತ್ತಾರೆ. ಪ್ರವರ್ತನೆಯನ್ನು ಬದಲಾಯಿಸಿಕೊಳ್ಳುತ್ತಾರೆ ಒಳ್ಳೆಯವರಾಗಿ ಬದಲಾಗುತ್ತಾರೆ.

ಅದಕ್ಕೆ ಭೂಲೋಕವನ್ನು ಪಾಠಗಳನ್ನು ಕರೆದುಕೊಳ್ಳುವ ಒಂದು ಪಾಠಶಾಲೆಗೆ ಹೋಲಿಸುತ್ತಾರೆ. ಭೂಲೋಕವೆನ್ನುವ ಪಾಠಶಾಲೆಯಲ್ಲಿ ಪ್ರತಿ ಜನ್ಮದಲ್ಲಿ ಎಷ್ಟೋ ಪಾಠಗಳನ್ನು ಕಲಿತುಕೊಳ್ಳುತ್ತಾರೆ.

ಆದ್ದರಿಂದ ತಿಳಿದುಕೊಳ್ಳಿ.... ಪಾಠಗಳು ಕಲಿಯಬೇಕೆಂದರೆ ಅನುಭವಗಳನ್ನು ಹೊಂದಬೇಕು. ಅನುಭವಗಳನ್ನು ಹೊಂದಬೇಕೆಂದರೆ, ಕರ್ಮಗಳನ್ನು ಮಾಡಬೇಕು. ಅದಕ್ಕೆ ಶ್ರೀ ಕೃಷ್ಣ ಪರಮಾತ್ಮ ಕರ್ಮಗಳನ್ನು ಮಾಡುವುದನ್ನು ಬಿಡಬೇಡ ಎಚಿದಿದ್ದಾರೆ.

ಶ್ಲೋ ॥ ಕರ್ಮಣ್ಯೇ ವಾಧಿಕಾರಸ್ತೇ ಮಾ ಪಲೇಷು ಕದಾಚನ
ಮಾ ಕರ್ಮಫಲ ಹೇತುರ್ಭೂರ್ಮಾತೆ ಸಂಗ್ಯೋಸ್ತವ ಕರ್ಮಣಿ (ಭ.ಗೀ 2–47)

ತಾತ್ಪರ್ಯ ಅರ್ಜುನ ನಿನಗೆ ಕರ್ಮವನ್ನು ಮಾಡುವುದರಲ್ಲಿ ಮಾತ್ರ ಅಧಿಕಾರವಿದೆ. ಆದರೆ ಕರ್ಮಫಲ ಸಾಧಿಸಲು ನಿನಗೆ ಅಧಿಕಾರ ಇಲ್ಲ. ಕರ್ಮಫಲಕ್ಕೆ ನೀನು ಕಾರಣೀ ಭೂತನಾಗಬಾರದು ಹಾಗೆಂದು ಕರ್ಮಗಳನ್ನು ಮಾಡುವುದು ಬಿಡಬಾರದು.

ಇಲ್ಲಿ ಶ್ರೀ ಕೃಷ್ಣನು ಕರ್ಮಗಳನ್ನು ಮಾಡುವುದು ಬಿಡಬಾರದು ಎಂದಿದ್ದಾರೆ ಹಾಗಾದರೆ ಕಷ್ಟಗಳು ಬರುವಾಗ ಕರ್ಮಗಳನ್ನು ಏಕೆ ಮಾಡಬೇಕು? ಎನ್ನುವ ಸಂದೇಹ ಬರುತ್ತದೆ. ಆದರೆ ಕರ್ಮಗಳು ಮಾಡುವುದರಿಂದ ಕಷ್ಟಗಳನ್ನು ಅನುಭವಿಸುವುದರಿಂದ ಅನುಭವವನ್ನು ಹೊಂದಿ ಪಾಠಗಳನ್ನು ಕಲಿತುಕೊಳ್ಳುತ್ತಾರೆ. ತಪ್ಪುಗಳನ್ನು ಸರಿಮಾಡಿಕೊಳ್ಳುತ್ತಾರೆ. ಯಾರಿಗೂ ತಮ್ಮ ಜೀವನದಲ್ಲಿ ಮತ್ತೆ ಅಂತಹ ನೋವುಗಳನ್ನು ಬಾರದಿರುವಂತೆ ನೋಡಿಕೊಳ್ಳುತ್ತಾರೆ. ಇದೆಲ್ಲವೂ ಜೀವನದಲ್ಲಿ ಅಭಿವೃದ್ಧಿ ಹೊಂದಲಿಕ್ಕೆ . ಅದಕ್ಕೆ ಶ್ರೀ ಕೃಷ್ಣರು ಕರ್ಮಗಳು ಮಾಡು ಎನ್ನುತ್ತಾರೆ.

ಅವರು ಕೆಟ್ಟ ಕರ್ಮಗಳನ್ನಾಗಲಿ, ಒಳ್ಳೆಯ ಕರ್ಮಗಳನ್ನಾಗಲಿ ಒಟ್ಟಾರೆ ಕರ್ಮಗಳನ್ನು ಮಾಡುತ್ತಾ ಇರಬೇಕು. ಪಾಪ ಕರ್ಮಗಳು ಮಾಡಿದರೂ, ಕಷ್ಟಗಳಿಂದ ಅನುಭವ ಸಂಪಾದಿಸಿ ಪಾಠಗಳ ಕಲಿತುಕೊಂಡು ಪರಿವರ್ತನೆ ಹೊಂದಿ ಜೀವನದಲ್ಲಿ ಬದಲಾವಣೆ ತಂದುಕೊಳ್ಳುತ್ತಾರೆ. ಅದಕ್ಕೆ ಕರ್ಮಗಳು ಮಾಡಬೇಕು.

ನಾವು ಮಕ್ಕಳಿಗೆ ಶಿಕ್ಷೆಗಳನ್ನು ಹಾಕುವಾಗ ಹೇಗೆ ಪಾಠಗಳನ್ನು ಕಲಿಸುತ್ತೇವೆ , ಒಳ್ಳೆಯ ಮಾರ್ಗದಲ್ಲಿ ಹೋಗಲು ಹೇಳುತ್ತೇವೆಯೋ ಹಾಗೆಯೇ ಸೃಷ್ಟಿ ಕೂಡ ನಮಗೆ ಕಷ್ಟಗಳನ್ನು ಕೊಟ್ಟು ಪಾಠಗಳನ್ನು ಕಲಿಸುತ್ತದೆ. ನಮ್ಮನ್ನು ಒಳ್ಳೆಯ ಮಾರ್ಗಕ್ಕೆ ತರುತ್ತದೆ.

ಅದರ ಮೂಲಕ ಎಲ್ಲರೂ ಎಲ್ಲ ಜೀವಿಗಳು ಆನಂದವಾಗಿ ಇರಬೇಕೆಂಬ ತನ್ನ ಆಶಯವನ್ನು ನೆರವೇರಿಸಿಕೊಳ್ಳುತ್ತದೆ. ಈ ಜೀವನ ಇರುವುದೇ ಪಾಠಗಳನ್ನು ಕಲಿಯಲು.

ಅಷ್ಟೆ ಹೊರತು ಜೀವನವೆಂದರೆ ಸಂಪಾದಿಸಲು, ಸಂಪಾದನೆಯನ್ನು ಹೆಚ್ಚಿಸಿಕೊಳ್ಳಲು, ಸಂತಾನಕ್ಕಾಗಿ, ಸುಖಗಳನ್ನು ಅನುಭವಿಸಲಿಕ್ಕಾಗಿ ಅಲ್ಲ. ಹಾಗೆ ಇತರರ ಸಂಪತ್ತನ್ನು ಅಪಹರಿಸುತ್ತಾ ಅವರನ್ನು ದುಃಖಕ್ಕೆ ಈಡು ಮಾಡುತ್ತಾ, ಅವರಿಗೆ ಅಶಾಂತಿಯನ್ನು ಉಂಟು ಮಾಡುತ್ತಾ ಜೀವನವನ್ನು ಕಳೆಯಲಲ್ಲ . ಅದಕ್ಕೆ ಜೀವನದಲ್ಲಿ ಎಷ್ಟೋ ಪಾಠಗಳನ್ನು ಕಲಿಯಬೇಕು ಎಷ್ಟೋ ತಿಳಿದುಕೊಳ್ಳಬೇಕು. ಎಷ್ಟು ನಿಯಮಗಳನ್ನು ತಿಳಿದುಕೊಳ್ಳಬೇಕು ಎಷ್ಟು ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು.

ಹಾಗಾದರೆ ಈ ಪಾಠಗಳನ್ನು ಯಾಕೆ ಕಲಿತುಕೊಳ್ಳಬೇಕು? ಎಂದರೆ ಜ್ಞಾನ ಸಂಪಾದಿಸಿಕೊಳ್ಳಲು ಎಂದು ತಿಳಿದುಕೊಂಡೆವು.

ಹೀಗೆ ಜೀವನದಲ್ಲಿ ಎಷ್ಟೋ ಜನ್ಮಗಳು ಪಾಠಗಳನ್ನು ಕಲಿತುಕೊಂಡ ನಂತರ ಅವರಿಗೆ ಅಂತರ್ಮಥನ ಶುರುವಾಗುತ್ತದೆ. ಆಲೋಚಿಸುತ್ತಾರೆ ಏಕೆ ಈ ಕಷ್ಟಗಳು? ಏಕೆ ಕಷ್ಟಗಳು ಬಂದಿದೆ? ಈ ಜನನವೇನು? ಮರಣವೇನು? ಮರಣಿಸಿದವನು ಏನಾಗುತ್ತಾನೆ? ಎಲ್ಲಿಗೆ ಹೋಗುತ್ತಾನೆ? ಹೋದವನು ಮತ್ತೆ ಬರುವವನೇ? ಬರುವುದಿಲ್ಲವೇ? ಬಂದರೆ ಯಾವಾಗ ಬರುತ್ತಾನೆ? ಹೇಗೆ ಮರಣಿಸುತ್ತಾನೆ? ಈ ಕಷ್ಟಗಳು ಬರದಂತೆ ಮಾಡಿಕೊಳ್ಳಲಾರವೇ? ಈ ಮಾನವರೆಲ್ಲರೂ ಜೀವನ ಒಂದು ರೀತಿಯ ಏಕೆ ಇರುವುದಿಲ್ಲ? ಕೆಲವರಿಗೆ ಕಷ್ಟಗಳು ಕೆಲವರಿಗೆ ಸುಖಗಳು ಭೋಗಗಳು, ದುಃಖ– ಆನಂದ, ಕೆಲವರಿಗೆ ರೋಗಗಳು, ಕೆಲವರಿಗೆ ಸಂತೋಷ ಹೀಗೆ ವಿಧವಿಧವಾಗಿ ಜೀವನದಲ್ಲಿ ಏಕೆ ಇದೆ? ಎನ್ನುವ ಅನೇಕ ವಿಧವಾದ ಸಂದೇಹಗಳು ಆಲೋಚನೆಗಳು ಆರಂಭವಾಗುತ್ತದೆ. ಅವರಿಗೆ ಇದೆಲ್ಲವೂ ಅಯೋಮಯವಾಗಿ ಕಾಣಿಸುತ್ತದೆ. ಅರ್ಥವಾಗುವುದಿಲ್ಲ ಆದರೆ ತಿಳಿದುಕೊಳ್ಳಬೇಕೆಂಬ ಆಸಕ್ತಿ ಇರುತ್ತದೆ.

ಆಗ ಅನಿಸುತ್ತದೆ ಅಸಲು ಈ ಜೀವನವೇಕೆ? ಏತಕ್ಕಾಗಿ ಜೀವನ? ಏನು ಮಾಡಲು? ಏನು ಸಾಧಿಸಲು ಈ ಜೀವನ ಇದೆ? ಈ ಜೀವನದಲ್ಲಿ ಏನು ಮಾಡಬೇಕು ಎನ್ನುವ ಪ್ರಶ್ನೆಗಳು ತಲೆದೋರುತ್ತದೆ.

ಆಗ ಅವರು ಕೆಲವು ಜನ ಗುರುಗಳನ್ನು ಹಿರಿಯರನ್ನು ಭೇಟಿಯಾಗುತ್ತಾರೆ ಅವರನ್ನು ಪ್ರಶ್ನಿಸಿ, ತಮ್ಮ ಸಂದೇಹಗಳನ್ನು ಪರಿಹರಿಸಿಕೊಳ್ಳಬೇಕೆನ್ನುತ್ತಾರೆ. ಹಾಗೆಯೇ

ಕೆಲವು ಆಧ್ಯಾತ್ಮಿಕ ಪುಸ್ತಕಗಳು ಓದುತ್ತಾರೆ. ಸ್ವಾಮಿ ವಿವೇಕಾನಂದ, ರಮಣ ಮಹರ್ಷಿ, ಮೆಹರ್ ಬಾಬಾರಂತಹವರ ಪುಸ್ತಕಗಳು, ಭಗವದ್ಗೀತೆ, ಬೈಬಲ್ ಕುರಾನ್ ನಂತಹ ಪುಸ್ತಕಗಳನ್ನು ಓದುತ್ತಾರೆ. ಆಗ ಅವರಿಗೆ ಆ ಗುರುಗಳಿಂದ ಪುಸ್ತಕಗಳಿಂದ ಸ್ವಲ್ಪ ಸ್ವಲ್ಪ ಉತ್ತರಗಳು ದೊರೆಯುತ್ತದೆ.

ಅವರು ಏನು ಹೇಳುತ್ತಾರೆ ಎಂದರೆ ನೀನು ಅಜ್ಞಾನದಲ್ಲಿರುವೆ ಅದಕ್ಕೆ ನಿನಗೆ ಇದೇನು ಅರ್ಥವಾಗುತ್ತಿಲ್ಲ. ಅಜ್ಞಾನದೊಂದಿಗೆ ಮಾಡುವ ಕೆಲಸಗಳಿಂದಲೇ ನಿನಗೆ ಕಷ್ಟಗಳು ಬರುತ್ತಿವೆ. ಇಂತಹ ಕಷ್ಟಗಳಿಂದ ಹೊರಬರಬೇಕೆಂದರೆ, ನೀನು ಜ್ಞಾನ ಸಂಪಾದಿಸಿಕೊಳ್ಳಬೇಕು. ಜ್ಞಾನ ಸಂಪಾದಿಸಿಕೊಂಡರೆ ನಿನಗೆ ಎಲ್ಲಾ ತಿಳಿಯುತ್ತದೆ. ಸಮಸ್ಯೆಗಳು ಬಗೆ ಹರಿಯುತ್ತದೆ. ನಿನಗೆ ಹುಟ್ಟಿ ಬರುವವರೆಗೂ ಮಾತ್ರವೇ ಇರುವ ಜೀವನವಲ್ಲ. ನಂತರವೂ ನೀನು ಮರಣಿಸಿದ ನಂತರವೂ, ನಿನಗೆ ಜೀವನವಿದೆ. ಈ ಸೃಷ್ಟಿಯಲ್ಲಿ ಕಾಣಿಸುವ ಈ ಭೂಲೋಕವೇ ಅಲ್ಲ ಇನ್ನೂ ಕೋಟ್ಯಾನು ಕೋಟಿ ಲೋಕಗಳಿವೆ. ಭೂಮಿ ಮೇಲೆ ಕಾಣುವ ಮಾನವರು, ಇತರ ಜೀವಿಗಳೇ ಅಲ್ಲ, ಇತರ ಲೋಕಗಳಲ್ಲಿ ಕೂಡ ಎಷ್ಟೋ ವಿಧವಾದ ಜೀವಿಗಳು ಇದ್ದಾರೆ. ನಿನಗೆ ಭೂಮಿ ಮೇಲೆ ಕಾಣಿಸುವುದಕ್ಕಿಂತ ಇನ್ನೂ ಎಷ್ಟೋ ವಿಶೇಷಗಳು, ವಿಸ್ಮಯಗಳು, ಈ ಲೋಕಗಳಲ್ಲಿ ಇವೆ. ಭೂಮಿ ಮೇಲೆ ನಿನಗೆ ಕಾಣಿಸುತ್ತಿರುವುದು ನೀನು ತಿಳಿದುಕೊಂಡಿರುವುದು ತುಂಬಾ ಸ್ವಲ್ಪ. ನೀನು ತಿಳಿದುಕೊಳ್ಳಬೇಕಾಗಿರುವುದು ಇನ್ನು ಎಷ್ಟೋ ಇದೆ.

ಶರೀರ ತ್ಯಜಿಸಿದ ನಂತರ ಮಾನವರು ಶರೀರವಿಲ್ಲದೆ ಪರಲೋಕಗಳಲ್ಲಿ ಇರುತ್ತಾರೆ. ಇದೆಲ್ಲ ಆ ಪರಲೋಕ ಜ್ಞಾನ ಹೊಂದಿದ್ದರೆ ತಿಳಿದುಕೊಳ್ಳುವೆ. ಆದರೆ ನೀನು ಪರಲೋಕ ಜ್ಞಾನ ತಿಳಿದುಕೊಳ್ಳುವುದಿಲ್ಲ. ಪರಲೋಕಗಳ ಕುರಿತು ಆಲೋಚಿಸುತ್ತಿಲ್ಲ. ಆದ್ದರಿಂದ ಸೃಷ್ಟಿಯ ಕುರಿತು ನಿನಗೆ ತಿಳಿದಿದ್ದು ತುಂಬಾ ಅಲ್ಪ. ನೀವು ತಿಳಿದುಕೊಳ್ಳಬೇಕಾದದ್ದು ಹೊಂದಬೇಕಾದ ಜ್ಞಾನ ಅನಂತ. ಅದೆಲ್ಲ ತಿಳಿದುಕೊಳ್ಳದ ಹೊರತು ನೀನು ಈ ಗೊಂದಲದಿಂದ ಹೊರ ಬರಲಾರೆ. ಆದ್ದರಿಂದ ಜ್ಞಾನವನ್ನು ಸಂಪಾದಿಸಿಕೋ, ಎಲ್ಲಾ ತಿಳಿದುಕೋ ಎಂದು ಹೇಳುತ್ತಾರೆ.

ಅವರು ಇನ್ನೂ ಏನು ಹೇಳುತ್ತಾರೆ ಎಂದರೆ, ಈ ಜೀವನದಲ್ಲಿ ನಡೆಯುವ ಸಂಘಟನೆಗಳೆಲ್ಲವೂ, ನೀನು ಕಲಿತುಕೊಳ್ಳಲು ನಡೆಯುತ್ತಿದೆ. ಈ ಸಂಘಟನೆಗಳು, ಕಷ್ಟಗಳು ನಿನಗೆ ಎಷ್ಟೋ ಪಾಠಗಳು ಕಲಿಸುತ್ತವೆ.

ಹಾಗೆ ಜೀವನದಲ್ಲಿ ಎಷ್ಟು ಹೆಚ್ಚು ಪಾಠಗಳು ಕಲಿತುಕೊಂಡರೆ, ಅಷ್ಟು ಹೆಚ್ಚು ಜ್ಞಾನವನ್ನು ಸಂಪಾದಿಸಿಕೊಳ್ಳಬಹುದು. ಜ್ಞಾನದ ಮೂಲಕ ಹೇಗೆ ಪ್ರವರ್ತಿಸಬೇಕು? ಅಂದರೆ ಏನು ಮಾಡಬೇಕು? ಏನು ಮಾಡಬಾರದು? ಎನ್ನುವುದು ತಿಳಿಯುತ್ತದೆ. ಹಾಗೆ ಜ್ಞಾನ ಹೆಚ್ಚುತ್ತಾ ಹೋದಂತೆ ಮಾಡಬಾರದ ಕೆಲಸಗಳನ್ನು ಮಾಡುವುದಿಲ್ಲ. ಕಷ್ಟಗಳು ಅನುಭವಿಸುವುದಿಲ್ಲ. ಹಾಗೆಯೇ ಮಾಡಬೇಕಾದದ್ದು ಮಾಡಿ ಜೀವನವನ್ನು ಸರಿಪಡಿಸಿಕೊಳ್ಳುವೆ, ಆನಂದವಾಗಿ ಜೀವಿಸುವೆ ಎಂದು ಹೇಳುತ್ತಾರೆ.

ಆದ್ದರಿಂದ ಯಾರಾದರೂ ತಿಳಿದುಕೊಳ್ಳಬೇಕಾಗಿರುವುದೇನೆಂದರೆ ಜ್ಞಾನ ಹೊಂದದಿದ್ದರೆ ಅಜ್ಞಾನದಲ್ಲಿ ಇರುತ್ತಾರೆ. ಅಜ್ಞಾನದಲ್ಲೇ ಇರುವುದರಿಂದ ಯಾವ ಕೆಲಸಗಳು ಮಾಡಬಾರದು, ಯಾವ ಕೆಲಸಗಳು ಮಾಡಬೇಕು ತಿಳಿಯದೆ ಮಾಡಬಾರದ ಕೆಲಸಗಳು, ಸೃಷ್ಟಿ ವಿರುದ್ಧವಾದ ಕೆಲಸಗಳು, ಧರ್ಮ ವಿರುದ್ಧವಾದ ಕೆಲಸಗಳು ಮಾಡುತ್ತಾರೆ. ಎಲ್ಲರಿಗೆ ನಷ್ಟವನ್ನು ಉಂಟು ಮಾಡುತ್ತಾರೆ. ತಾವು ಸ್ವತಃ ನಷ್ಟ ಪಡುತ್ತಾರೆ. ಇತರರನ್ನು ಕಷ್ಟಕ್ಕೀಡು ಮಾಡುತ್ತಾರೆ.

ಹಾಗಾದರೆ ಅಂತಹ ಕೆಲಸಗಳು ಏಕೆ ಮಾಡುತ್ತಾರೆ? ಅಂದರೆ ಅಂತಹ ಕೆಲಸಗಳು ಮಾಡುವುದರಿಂದ ಬರುವ ನಷ್ಟವೇನು ಮಾಡದಿದ್ದರೆ ಬರುವ ಲಾಭವೇನು? ಎನ್ನುವ ಜ್ಞಾನ ಇಲ್ಲದಿರುವುದರಿಂದ. ಆದರೆ ಪ್ರತಿ ಜನ್ಮದಲ್ಲಿ ಅನುಭವದ ಮೂಲಕ ಕೆಲವು ಪಾಠಗಳು ಕಲಿತುಕೊಳ್ಳುವುದರಿಂದ, ಅನುಭವದೊಂದಿಗೆ ಅ ಜ್ಞಾನವನ್ನು ಹೊಂದುತ್ತಾರೆ. ಅದಕ್ಕೆ ಪತ್ರೀಜಿ "ಅನುಭವವೇ ಜ್ಞಾನ" ಎಂದು ಹೇಳುತ್ತಾರೆ. ಅದಕ್ಕೆ ಮುಂಚೆ ಇತರರು ಹೇಳಿದರು ಅರ್ಥವಾಗುವುದಿಲ್ಲ. ಆದ್ದರಿಂದಲೇ, ಮಾಡಬಾರದ ಕೆಲಸಗಳನ್ನು ಮಾಡುತ್ತಾ ಇರುತ್ತಾರೆ. ತಿಳಿದೂ ತಿಳಿದೂ ತಪ್ಪುಗಳನ್ನು ಮಾಡುತ್ತಾರೆ.

ಜ್ಞಾನವಿಲ್ಲದಿರುವುದರಿಂದ ತಿಳಿದರೂ ತಪ್ಪುಗಳನ್ನು ಮಾಡುತ್ತಾರೆ, ಎನ್ನುವುದಕ್ಕೆ ಒಂದು ಚಿಕ್ಕ ಉದಾಹರಣೆಯನ್ನು ನೋಡೋಣ.

ಯಾರನ್ನಾದರೂ ಸುಳ್ಳು ಹೇಳಬಹುದಾ ಎಂದು ಕೇಳಿದರೆ ಹೇಳಬಾರದು ಸುಳ್ಳು ಹೇಳುವುದು ತಪ್ಪು ಎಂದು ಹೇಳುತ್ತಾರೆ. ಆದರೆ ಪ್ರತಿದಿನ ಎಷ್ಟೋ ಸುಳ್ಳುಗಳನ್ನು ಹೇಳುತ್ತಾರೆ. ಪ್ರತಿ ಚಿಕ್ಕ ವಿಷಯಕ್ಕೂ ಸುಮ್ಮನೆ ಸುಳ್ಳು ಹೇಳುತ್ತಾರೆ . ತಮಾಷೆಗಾಗಿ ಸುಳ್ಳು ಹೇಳುತ್ತಾರೆ. ಸುಳ್ಳುಗಳನ್ನು ಹೇಳುತ್ತಾ ಪರಿಹಾಸ್ಯಕ್ಕೆ ಹಾಗೆ ಹೇಳಿದೆ ಎಂದು ಕೂಡ ಹೇಳುತ್ತಾರೆ.

ಅದೇ ಜ್ಞಾನವಿರುವ ಸ್ವಾಮಿ ವಿವೇಕಾನಂದರರನ್ನು ತೆಗೆದುಕೊಳ್ಳಿ ಆತ ಅಸತ್ಯವನ್ನು ಆಡುವರೇ? ಎಂತಹ ಪರಿಸ್ಥಿತಿಯಲ್ಲೂ ಕೂಡ ಸುಳ್ಳು ಹೇಳಿಲ್ಲ. ಇತರರನ್ನು ವ್ಯತ್ಯಾಸವಾಗಿ ಮಾತಾಡುವುದಿಲ್ಲ. ಇಲ್ಲದಿರುವುದನ್ನು ಹೇಳುವುದಿಲ್ಲ, ಇದ್ದದ್ದನ್ನು ಇದ್ದಂತೆ ಹೇಳುತ್ತಾರೆ. ಎಂತಹ ಪರಿಸ್ಥಿತಿಯಲ್ಲೂ  ಸುಳ್ಳು ಹೇಳುವುದಿಲ್ಲ. ಕಾರಣ ಆತ ಜ್ಞಾನಿ,  ಸುಳ್ಳು ಹೇಳಿದರೆ ಬರುವ ನಷ್ಟವೇನು? ಎಂದು ಆತನಿಗೆ ತಿಳಿದಿದೆ. ನಂತರ ಅದರ ಫಲಿತ ಎಷ್ಟು ನಷ್ಟವನ್ನು ಉಂಟು ಮಾಡುವುದೋ, ಸುಳ್ಳು ಹೇಳಿ ಇತರರನ್ನು ಮೋಸಗೊಳಿಸುವುದು ಎಂತಹ ಸೃಷ್ಟಿ ವಿರುದ್ಧವಾದ ಕೆಲಸವೋ? ಅದರ ಫಲಿತ ತಾನು ಯಾವ ವಿಧವಾಗಿ ಅನುಭವಿಸಬೇಕಾಗಿ ಬರುವುದೋ? ಎಂದು ಅವರಿಗೆ ತಿಳಿದಿದೆ.

ಅಷ್ಟೇ ಅಲ್ಲ ಯಾರಾದರೂ ನಂಬಿದವರಿಗೆ ಸುಳ್ಳು ಹೇಳಿ ಮೋಸಗೊಳಿಸಿದರೆ ಅವರು ಎಷ್ಟೋ ಬಾಧೆಗೊಳಗಾಗುತ್ತಾರೆ ಎನ್ನುವ ಜ್ಞಾನ ಅವರಿಗಿದೆ. ಆದ್ದರಿಂದ ಅವರು ಎಂತಹ ಪರಿಸ್ಥಿತಿಗಳಲ್ಲೂ ಸುಳ್ಳು ಹೇಳುತ್ತಿರಲಿಲ್ಲ.

ಆದರೆ ಸಾಮಾನ್ಯರು ತಿಳಿದು ಕೂಡ ಈ ಕೆಲಸ ಏಕೆ ಮಾಡುತ್ತಿದ್ದಾರೆ? ಎಂದರೆ ಸುಳ್ಳು ಏಕೆ ಹೇಳುತ್ತಿದ್ದಾರೆ? ಎಂದರೆ ಜ್ಞಾನವಿಲ್ಲ, ಅದರಿಂದಲೇ ತಪ್ಪುಗಳನ್ನು ಮಾಡುತ್ತಾರೆ. ತಾವು ನಷ್ಟ ಹೊಂದುತ್ತಿದ್ದಾರೆ ಇತರರನ್ನು ನಷ್ಟಗೊಳಿಸುತ್ತಿದ್ದಾರೆ.

ಆದರೆ ಲೋಕದಲ್ಲಿ ಎಷ್ಟೋ ಜನ ಹಿರಿಯರಿಂದ, ಗುರುಗಳಿಂದ, ಅವರ ಉಪನ್ಯಾಸಗಳಿಂದ ಎಷ್ಟೋ ವಿಷಯಗಳು ಧರ್ಮಗಳು ತಿಳಿದುಕೊಳ್ಳುತ್ತಿದ್ದಾರೆ. ಆದರೆ ಹಾಗೆ ಸುಮ್ಮನೆ ತಿಳಿದುಕೊಳ್ಳುವುದರಿಂದ ಪ್ರಯೋಜನವಿರುವುದಿಲ್ಲ. ತುಂಬಾ ಜನರಿಗೆ ಎಷ್ಟೋ ವಿಷಯಗಳು ಗೊತ್ತಿದೆ ಆದರೆ ಎಷ್ಟು ಆಚರಿಸುತ್ತಿದ್ದಾರೆಯೇ? ಅಂದರೆ ಇಲ್ಲವೆಂದೆ ಹೇಳಬಹುದು. ಕಾರಣ ಅದರ ಅನುಭವ ಅವರಿಗೆ ಆಗಿಲ್ಲ ಆದ್ದರಿಂದ "ಅನುಭವ ಜ್ಞಾನವೇ ಆಚರಣೆಗೆ ಬರುತ್ತದೆ" ಎಂದು ತಿಳಿದುಕೊಳ್ಳಬೇಕು. ಅನುಭವದ ಮೂಲಕ ಕಲಿತ ಪಾಠಗಳಿಂದ ಹೊಂದಿದ ಜ್ಞಾನದಿಂದ ತಪ್ಪುಗಳು ಸರಿ ಮಾಡಿಕೊಳ್ಳುವುದೆ ಅಲ್ಲದೆ,  ತಪ್ಪುಗಳು ಮಾಡದಂತೆ ಇರುತ್ತಾರೆ. ಹಾಗೆ ಜ್ಞಾನ ಹೆಚ್ಚುತ್ತಾ ಹೋದಂತೆ, ಜೀವನದಲ್ಲಿ ತಪ್ಪುಗಳು ಪಾಪಗಳು ಕಡಿಮೆಯಾಗುತ್ತವೆ.

ಹಾಗಾದರೆ ಈ ಜ್ಞಾನ ಏತಕ್ಕಾಗಿ? ತಪ್ಪುಗಳು ಪಾಪಗಳು ಕಡಿಮೆ ಮಾಡಿಕೊಳ್ಳಲು. ತಪ್ಪುಗಳು ಮಾಡದೇ ಇರುವುದಕ್ಕಾಗಿ. ಇನ್ನೂ ಏನಾದರೂ ಕಾರಣವಿದೆ ಎಂದರೆ ಈ ಜ್ಞಾನ ಆಧ್ಯಾತ್ಮಿಕವಾಗಿ ಆತ್ಮ ಪರವಾಗಿ ಅಭಿವೃದ್ಧಿಯಾಗಲು ಹೇಳುತ್ತಿದ್ದೇವೆ. ಆತ್ಮ ಎಂದರೆ

ನಾವು ಅಲ್ಲವೇ ಅಂದರೆ ನಮ್ಮ ಏಳಿಗೆಗೆ ಅದು ಸಹಾಯಕ. ಆದ್ದರಿಂದ ನಾವು ಎಷ್ಟು ಹೆಚ್ಚಿನ ಜ್ಞಾನ ಸಂಪಾದಿಸಿದರೆ ಅಷ್ಟು ಏಳಿಗೆಯಾದಂತೆ ಲೆಕ್ಕ. ಹಾಗಾದರೆ ಆಧ್ಯಾತ್ಮಿಕವಾಗಿ ಆತ್ಮ ಪರವಾಗಿ ಅಭಿವೃದ್ಧಿಯಾವುದು ಏಕೆ ಅವಶ್ಯಕ?

ಮೊದಲು ನಾವು ಒಂದು ವಿಷಯವನ್ನು ತಿಳಿದುಕೊಳ್ಳಬೇಕು. ಏನೆಂದರೆ, ನಾವು ದೇಹಗಳಲ್ಲ, ದೇಹ ದಾರಿಗಳು. ಅಂದರೆ ದೇಹವನ್ನು ಧರಿಸಿದ 'ಆತ್ಮರು'. ಅಂದರೆ ಇದನ್ನೇ ನಾವೆಲ್ಲರೂ ಈಗಾಗಲೇ ತಿಳಿದುಕೊಂಡಿದ್ದೇವೆ.

ಆದರೆ ಈ ಲೋಕದಲ್ಲಿ ಎಲ್ಲಾ ತಾವು ದೇಹವೆಂದೆ ಭಾವಿಸುತ್ತಿದ್ದಾರೆ. ದೇಹ ಪರವಾಗಿ ಅಭಿವೃದ್ಧಿಯಾಗಲು ಪ್ರಯತ್ನಿಸುತ್ತಿದ್ದಾರೆ. ದೇಹದ ಲಾಭಗಳಿಗಾಗಿ ನೋಡುತ್ತಿದ್ದಾರೆ. ಅಂದರೆ ಹಣದ ಪರವಾಗಿ ಏಳಿಗೆಯಾಗಲು, ಉದ್ಯೋಗದಲ್ಲಿ ಅಭಿವೃದ್ಧಿ ಹೊಂದಲು, ವ್ಯಾಪಾರದಲ್ಲಿ ಅಭಿವೃದ್ಧಿ ಹೊಂದಲು, ವೃತ್ತಿಯಲ್ಲಿ ಅಭಿವೃದ್ದಿ ಹೊಂದಲು, ಪದವಿ ಹೊಂದಲು, ಪ್ರಯತ್ನಿಸುತ್ತಿದ್ದಾರೆ. ಈ ಅಭಿವೃದ್ಧಿಗಳೆಲ್ಲವೂ ದೇಹ ಸಂಬಂಧವಾದದ್ದು ಆದರೆ ತಾನು 'ಆತ್ಮ'ವಾದಾಗ ಆತ್ಮ ಪರವಾಗಿ ಏಳಿಗೆ ಯಾಗಬೇಕೆಂದು ತಿಳಿದುಕೊಳ್ಳಬೇಕು. ಆತ್ಮಲಾಭಗಳನ್ನು ಹೊಂದಬೇಕು. ಆತ್ಮೋನ್ನತಿಯೇ, ಆಧ್ಯಾತ್ಮಿಕತೆಯ ಉನ್ನತಿ ಎನ್ನುತ್ತಾರೆ.

ಏಕೆಂದರೆ ಪ್ರಾಪಂಚಿಕವಾಗಿ ಅಭಿವೃದ್ಧಿಯಾಗುವುದು ಬೇರೆ, ಆಧ್ಯಾತ್ಮಿಕವಾಗಿ ಅಭಿವೃದ್ಧಿಯಾಗುವುದು ಬೇರೆ. ಪ್ರಾಪಂಚಿಕವಾಗಿ ಉನ್ನತಿ ಸಾಧಿಸಿದವರು, ಪ್ರಾಪಂಚಿಕ ಲಾಭಗಳೆ ಅಂದರೆ ದೇಹ ಲಾಭಗಳೇ ಹೊಂದುತ್ತಾರೆ. ಅದಕ್ಕಾಗಿಯೇ ಶ್ರಮಿಸುತ್ತಾರೆ. ಆದರೆ ಆಧ್ಯಾತ್ಮಿಕವಾಗಿ ಉನ್ನತಿ ಹೊಂದಿದವರು. ಆತ್ಮ ಲಾಭಗಳು ಹೊಂದುತ್ತಾರೆ. ಆತ್ಮ ಸ್ಥಿತಿಯನ್ನು ತಿಳಿದುಕೊಂಡ ನಾವು ಆತ್ಮರು. ಆದ್ದರಿಂದ ಆತ್ಮಲಾಭಗಳೇ ನಮಗೆ ಉಂಟಾಗುವ ನಿಜವಾದ ಲಾಭಗಳು. ಈ ಆತ್ಮ ಲಾಭಗಳೇ ನಮ್ಮ ಆತ್ಮದ ಬೆಳವಣಿಗೆಗೆ ಉಪಕರಿಸುತ್ತದೆ. ಆತ್ಮ ಅಭಿವೃದ್ದಿ ಹೊಂದುತ್ತಾ ಹೋದಂತೆ ಜ್ಞಾನ ಹೆಚ್ಚುತ್ತಾ, ಶರೀರವನ್ನು ತ್ಯಜಿಸಿದ ನಂತರ ಸೃಷ್ಟಿಯಲ್ಲಿರುವ ಕೋಟ್ಯಾನುಕೋಟಿ ಲೋಕಗಳಲ್ಲಿರುವ ಉನ್ನತ ಲೋಕಗಳನ್ನು ಸೇರಿಕೊಳ್ಳುತ್ತಾರೆ. ಅಂದರೆ ಊರ್ಧ್ವ ಲೋಕಗಳಿಗೆ ಸೇರಿಕೊಳ್ಳುತ್ತಾರೆ. ಇದೇ ಆತ್ಮದ ಬೆಳವಣಿಗೆ.

ನಾವು ಗಮನಿಸಿದರೆ ಈ ಲೋಕದಲ್ಲಿ ಒಂದು ಆಚಾರವಿದೆ, ಯಾರಾದರೂ ಮರಣಿಸಿದರೆ ಎರಡು ವಿಧವಾದ ಕಾರ್ಯಕ್ರಮಗಳನ್ನು ಮಾಡುತ್ತಾರೆ.

1) ಸ್ನೇಹಿತರು ಸಂತಾಪ ಸಭೆಯನ್ನು ಏರ್ಪಡಿಸಿ, ಅವರ ವಿಶಿಷ್ಟ ಗುಣವನ್ನು ಗುರುತಿಸಿ ಹೇಳಿ ಅವರ ಆತ್ಮಕ್ಕೆ ಶಾಂತಿ ಉಂಟಾಗಬೇಕೆಂದು ಭಗವಂತನನ್ನು ಪ್ರಾರ್ಥಿಸುತ್ತಾ ಎರಡು ನಿಮಿಷಗಳು ಮೌನವಾಚರಿಸುತ್ತಾರೆ.

2) ಬಂಧುಗಳು ಕರ್ಮಕಾಂಡಗಳನ್ನು ಮಾಡುತ್ತಾರೆ. ಕಾರಣ ದೇಹ ಬಿಟ್ಟ 'ಆತ್ಮ' ಅಂದರೆ ಅವರು ಈ ಭೂಲೋಕವನ್ನು ಬಿಟ್ಟು ಪರಲೋಕದಲ್ಲಿ ಅಂದರೆ ಊರ್ಧ್ವ ಲೋಕಗಳಲ್ಲಿ ಸೇರಿಕೊಳ್ಳಲು, ಉನ್ನತ ಗತಿಗಳನ್ನು ಹೊಂದಬೇಕೆಂದು ಈ ಕರ್ಮಕಾಂಡ ಗಳನ್ನು ಮಾಡುತ್ತಾರೆ ಅಂದರೆ ಈಗ ಇದ್ದ ಉನ್ನತ ಲೋಕದಿಂದ ಇನ್ನೊಂದು ಉನ್ನತಲೋಕ ಹೊಂದಬೇಕೆಂಬ ಉದ್ದೇಶದಿಂದ ಕರ್ಮ ಕಾಂಡಗಳನ್ನು ಮಾಡುತ್ತಾರೆ. ಇದೆಲ್ಲಾ ಏಕೆ ಮಾಡುತ್ತಿದ್ದಾರೆ? ಎಂದರೆ ಹೋದವರು ಆತ್ಮಗಳಾದ್ದರಿಂದ ಆತ್ಮದ ಬೆಳವಣಿಗೆಗಾಗಿಯೇ ಈ ಕಾರ್ಯಕ್ರಮಗಳೆಲ್ಲ.

ಇಲ್ಲಿ ತಿಳಿದುಕೊಳ್ಳಬೇಕಾಗಿರುವುದು ಏನೆಂದರೆ? ಅವರಿಗಾಗಿ ಮತ್ತೊಬ್ಬರು ಮಾಡುವ ಪ್ರಾರ್ಥನೆಗಳಿಂದಾಗಲಿ, ಕರ್ಮ ಕಾಂಡಗಳಿಂದಲಾಗಲಿ 'ಆತ್ಮ'ಕ್ಕೆ ಯಾವ ಪ್ರಯೋಜನವಿರುವುದಿಲ್ಲ. ಆತ್ಮ ಉನ್ನತಿಯಾಗಬೇಕೆಂದರೆ, ಆತ್ಮ ಉನ್ನತ ಲೋಕಗಳನ್ನು ಸೇರಬೇಕೆಂದರೂ, ಜೀವಿಸಿರುವಾಗಲೇ ದೇಹದೊಂದಿಗೆ ಮಾಡುವ ಸಾಧನೆಯಿಂದ, ಜೀವನದಲ್ಲಿ ಕಲಿತುಕೊಳ್ಳುವ ಪಾಠಗಳಿಂದ ಸಂಪಾದಿಸಿಕೊಂಡ ಜ್ಞಾನದಿಂದಲೇ ಆತ್ಮ ಉನ್ನತಿ ಸಾಧಿಸುತ್ತಾ, ಉನ್ನತ ಲೋಕಗಳು ಸೇರಿಕೊಳ್ಳುತ್ತದೆ.

ಹಾಗಾದರೆ ಆತ್ಮಾಭಿವೃದ್ಧಿ ಏಕೆ? ಆತ್ಮಾಭಿವೃದ್ದಿ ಆಗದಿದ್ದರೆ ಏನಾದರೂ ನಷ್ಟವಿದೆಯೇ? ಆತ್ಮಾಭಿವೃದ್ಧಿ ಅಂದರೆ ಜೀವನ ಗಮ್ಯ ಸೇರಲು. ಜೀವನದ ಲಕ್ಷ್ಯ ಸಾಧಿಸಲು ಎಂದು ಹೇಳಿಕೊಂಡಿದ್ದೇವೆ. ಹಾಗಾದರೆ ಜೀವನ ಗಮ್ಯ ಏಕೆ ಸೇರಿಕೊಳ್ಳಬೇಕು? ಜೀವನ ಲಕ್ಷ್ಯವನ್ನು ಏಕೆ ಸಾಧಿಸಬೇಕು?

# ಗಮ್ಯ – ಲಕ್ಷ್ಯ

ಜೀವನಕ್ಕೆ ಗಮ್ಯವೇ ಮುಖ್ಯ, ಲಕ್ಷ್ಯ ಮುಖ್ಯವೇ? ನಮ್ಮ ಗಮ್ಯವೇನೆಂದು ನಮಗೆ ತಿಳಿಯದಿದ್ದರೆ ನಮ್ಮ ಜೀವನ ಪ್ರಯಾಣ ಹೇಗೆ ನಡೆಸಬೇಕು ? ಎನ್ನುವುದು ಹೇಗೆ ತಿಳಿಯುತ್ತದೆ? ಹಾಗೆ ನಮ್ಮ ಪ್ರಯಾಣ ಎಲ್ಲಿಗೆ ಸಾಗುತ್ತಿದೆ?ಎತ್ತ ಸಾಗುತ್ತಿದ್ದೇವೆ? ಎನ್ನುವುದು ಹೇಗೆ ತಿಳಿಯುತ್ತದೆ? ನಮ್ಮ ದಾರಿ ಯಾವುದು? ಈಗ ಯಾವದಾರಿಯಲ್ಲಿ ಪ್ರಯಾಣಿಸುತ್ತಿದ್ದೇವೆ? ಸರಿಯಾದ ದಾರಿಯಲ್ಲಿ ಪ್ರಯಾಣಿಸದಿದ್ದರೆ, ಮಾಡಿದ ಪ್ರಯಾಣ ಅದಕ್ಕೆ ಹಾಕಿದ ಶ್ರಮ ವ್ಯರ್ಥವಲ್ಲವೇ!? ಆದ್ದರಿಂದ ಮೊದಲು ನಮ್ಮ ಗಮ್ಯವೇನೆಂದು ತಿಳಿದುಕೊಳ್ಳಬೇಕು. ಅದಕ್ಕೆ ತಕ್ಕ ಮಾರ್ಗದರ್ಶಕರನ್ನು ಅನುಸರಿಸಬೇಕು. ಕುರಿಗಳು ಹಾಗೆ ಅಲ್ಲವೇ ತನ್ನ ಕಾವಲುಗಾರರನ್ನು ಅನುಸರಿಸುತ್ತವೆ. ಜೀವನ ಪ್ರಯಾಣ ಸಾಗಿಸುವವನು ಕೂಡಾ ತನ್ನ ಕಾವಲುಗಾರರನ್ನು ಅಂದರೆ, ಸರಿಯಾದ ದಾರಿಯಲ್ಲಿ ನಡೆಸಬಲ್ಲ ಗುರುವನ್ನು ಆಶ್ರಯಿಸಬೇಕು. ಇಲ್ಲದಿದ್ದರೆ ಅವನ ಬದುಕು ಕಾವಲುಗಾರನಿಲ್ಲದ ಕುರಿಯಂತೆ ಆಗುತ್ತದೆ.

# ಕಾವಲುಗಾರನಿಲ್ಲದ ಕುರಿಗಳು

ಕಾವಲುಗಾರನಿಲ್ಲದ ಕುರಿಗಳು ಗಮ್ಯವರಿಯದ ದಾರಿಹೋಕರಂತೆ. ನಡೆಸುವವರು ಇಲ್ಲದಿದ್ದರೆ, ಕುರಿಗಳು ಎತ್ತ ಹೋಗಬೇಕೋ ತಿಳಿಯುವುದಿಲ್ಲ. ಎಲ್ಲಿ ಆಹಾರ ಸಿಗುವುದೋ ತಿಳಿಯುವುದಿಲ್ಲ. ದಾರಿ ತಪ್ಪುವ ಪ್ರಮಾದವಿರುತ್ತದೆ. ಆಪತ್ತಿನಲ್ಲಿ, ಕಷ್ಟಗಳಲ್ಲಿ ಸಿಲುಕಿ, ಕಷ್ಟಗಳ ಪಾಲಾಗುತ್ತವೆ.

ಹಾಗೆ ಮಾನವನ ಜೀವನದಲ್ಲಿಯೂ, ಸರಿಯಾದ ಮಾರ್ಗ ಅಂದರೆ, ಧರ್ಮಮಾರ್ಗ, ಸತ್ಯಮಾರ್ಗ, ನೀತಿಮಾರ್ಗವನ್ನು ತೋರಿಸುವವರು ಇಲ್ಲದಿದ್ದರೆ, ಏನು ಮಾಡುತ್ತಿದ್ದೇವೋ ತಿಳಿಯುವುದಿಲ್ಲ. ಏನು ಮಾಡಬೇಕೆಂದು? ತಿಳಿಯುವುದಿಲ್ಲ. ಮಾಡಬಾರದನ್ನೇ ಮಾಡುತ್ತಾನೆ. ಕೊನೆಗೆ ದುಃಖಕ್ಕೆ ಒಳಗಾಗಿ ಕಷ್ಟಗಳ ಪಾಲಾಗುತ್ತಾನೆ.

ಅಂದರೆ ಒಂದು ವಿಧವಾಗಿ ಪ್ರಸ್ತುತ ಸಮಾಜದಲ್ಲಿ ಕಾವಲು ಇಲ್ಲದ ಕುರಿಗಳಂತೆ ಪ್ರಜೆಗಳು ಜೀವಿಸುತ್ತಿದ್ದಾರೆ. ಅವರ ಗಮ್ಯನವೇನೆಂದು ಅವರಿಗೆ ತಿಳಿದಿಲ್ಲ. ಅವರ ಲಕ್ಷ್ಯವೇನು ತಿಳಿದಿಲ್ಲ. ಏನು ಮಾಡುತ್ತಿದ್ದಾರೋ, ಎತ್ತ ಪ್ರಯಾಣಿಸುತ್ತಿದ್ದರೋ, ತಿಳಿದಿಲ್ಲ. ಎಲ್ಲಾ ಅಸ್ತವ್ಯಸ್ತ. ಎಲ್ಲಾ ಲೋಕ ವಿರುದ್ಧವಾದ ಕೆಲಸಗಳು. ಒಂದು ವಿಧವಾಗಿ ಹೇಳಬೇಕೆಂದರೆ ದಾರಿ ತಿಳಿಯದ, ಗಮ್ಯ ತಿಳಿಯದ ದಾರಿಹೋಕರಂತೆ ಅಂದರೆ ಕಾವಲುಗಾರರಿಲ್ಲದ ಕುರಿಗಳಂತೆ ಇದ್ದಾರೆ.

ಅದಕ್ಕಾಗಿ ಜೀಸಸ್‌ರನ್ನು ಕಾವಲುಗಾರ ಎಂದಿದ್ದಾರೆ. ಕಾವಲುಗಾರ ಎಂದರೆ ಕುರಿಗಳನ್ನು ಕಾಯುವುದಲ್ಲ ಕುರಿಗಳನ್ನು ನೋಡಿಕೊಳ್ಳುವವನು ಎಂದಲ್ಲ.... ಎಲ್ಲರನ್ನೂ ಸರಿಯಾದ ಮಾರ್ಗದಲ್ಲಿ ನಡೆಸುವವನು, ರಕ್ಷಿಸುವವನು ಎಂದರ್ಥ. ನಷ್ಟ ಹೋಗದಂತೆ, ನೋಡಿಕೊಳ್ಳುವವನು ಎಂದರ್ಥ. ಶಾಂತಿಯಿಂದ ಸುಖವಾಗಿ ಯಾವ ಒಂದು ಕೊರತೆ ಇಲ್ಲದೆ ಜೀವಿಸುವಂತೆ ಮಾಡುವವನು ಎಂದು ಅರ್ಥ. ತಪ್ಪು ದಾರಿ ಹಿಡಿಯದಂತೆ ಮಾಡುವವನು ಎಂದು ಅರ್ಥ.



ಹಾಗೆ ಭೂಮಿಯ ಮೇಲೆ ಬಂದ ಯೋಗೀಶ್ವರೆಲ್ಲರೂ ಶ್ರೀ ಕೃಷ್ಣ, ಬುದ್ಧ ಭಗವಾನ್, ಮಹಮದ್, ಗುರುನಾನಕ್, ಮಹಾವೀರ, ಪತ್ರೀಜಿಯಂತಹವರು ಕಾವಲುಗಾರರೇ....

ಮಾನವರನ್ನು ಸರಿಯಾದ ಮಾರ್ಗದಲ್ಲಿ ನಡೆಸಲು ಬಂದವರೇ. ದುಃಖದಲ್ಲಿ ಬೀಳದಂತೆ, ದುಃಖದಲ್ಲಿ ಸಿಲುಕಿಕೊಂಡಿರುವವರನ್ನು ದುಃಖದಿಂದ ಹೊರ ಬರುವಂತೆ, ಮಾಡಲು ಬಂದಿದವರು. ಇವರೆಲ್ಲರೂ ದುಃಖ ನಿವಾರಣಾ ಮಾರ್ಗವನ್ನು ತಿಳಿದುಕೊಂಡ ಕಾವಲುಗಾರರು. ಯಾರಾದರೆ ಇವರನ್ನು ಅನುಸರಿಸುವರು ಅವರ ಮಾರ್ಗದಲ್ಲಿ ಪಯಣಿಸುವರೋ, ಅವರೆಲ್ಲರೂ ತಪ್ಪದೆ ದುಃಖದಿಂದ ಹೊರಬರುತ್ತಾರೆ. ಆದ್ದರಿಂದ ಅವರ ಮಾರ್ಗದಲ್ಲಿ ನಡೆಯುವವರೆಲ್ಲರೂ, ಕಾವಲುಗಾರರಿರುವ ಕುರಿಗಳು ; ಅವರ ಮಾರ್ಗದಲ್ಲಿ ನಡೆಯದೇ ಇರುವವರು ಕಾವಲುಗಾರನಿಲ್ಲದ ಕುರಿಗಳು .

ಹಾಗೆ ಜೀವನಕ್ಕೆ ಒಂದು ಲಕ್ಷ್ಯ ಇರುತ್ತದೆ. ನಮ್ಮ ಜೀವನ ಲಕ್ಷ್ಯವೇನೋ ತಿಳಿಯದಿದ್ದರೆ, ನಾವು ಸಾಧಿಸಿಬೇಕಾಗಿರುದೇನು ಎಂದು ತಿಳಿಯದೆ ಹೋದರೆ, ನಮ್ಮ ಜೀವನದಲ್ಲಿ ಏನು ಮಾಡಬೇಕು? ಎಂದು ಹೇಗೆ ತಿಳಿಯುತ್ತದೆ? ಏನು ಮಾಡುತ್ತಿದ್ದೇವೆ? ಮಾಡುತ್ತಿರುವುದು ಸರಿಯಾಗಿದೆಯೇ? ಇಲ್ಲವೇ? ಹೇಗೆ ತಿಳಿಯುತ್ತದೆ? ನಮ್ಮ ಲಕ್ಷ್ಯ ನಮಗೆ ತಿಳಿಯದಿದ್ದರೆ ನಾವು ಸಾಧಿಸಬೇಕಾಗಿರುವುದೇನು ಎಂದು ನಮಗೆ ತಿಳಿಯದಿದ್ದರೆ, ನಾವು ಸಾಧಿಸಿರುವುದೆಲ್ಲವೂ, ಸಾಧಿಸಬೇಕೆಂದಿರುವ ಎಲ್ಲವೂ ವ್ಯರ್ಥವಲ್ಲವೇ? ನಾವು ಪಟ್ಟ ಶ್ರಮ ಕಷ್ಟ ಎಲ್ಲಾ ವ್ಯರ್ಥವಲ್ಲವೇ?

ನಾವು ಏನೇನೋ ಮಾಡಿ, ಸಂಪಾದಿಸಿ, ಸಾಧಿಸಿ, ಹಿಗ್ಗುತ್ತೇವೆ ಅದೇ ದೊಡ್ಡದು ಎಂದು ಭಾವಿಸುತ್ತೇವೆ, ಗರ್ವ ಪಡುತ್ತೇವೆ. ಉನ್ನತವಾಗಿ ಹೇಳಿಕೊಳ್ಳುತ್ತೇವೆ. ಆದರೆ ಎಲ್ಲ ವ್ಯರ್ಥವೇ ಅಲ್ಲವೇ? ಸಾಧಿಸಬೇಕಾದದ್ದು ಒಂದಾದರೆ ಸಾಧಿಸಿದ್ದು ಮತ್ತೊಂದು. ಹೀಗಾದರೆ ಪ್ರಯೋಜನವೇನು? ಸಾಧಿಸಿರುವುದೆಲ್ಲ ವ್ಯರ್ಥವಲ್ಲವೇ ? ಸಮಯ, ಶಕ್ತಿ ಕೊನೆಗೆ ಜೀವನವೇ ಎಷ್ಟು ವ್ಯರ್ಥ ಮಾಡಿಕೊಂಡಂತೆ. ಅದರಿಂದ ನಮ್ಮ ಶಕ್ತಿಯುಕ್ತಿಗಳು, ಜೀವನ ವ್ಯರ್ಥವಾಗಬಾರದು ಎಂದರೆ ಮೊದಲು ನಮ್ಮ ಜೀವನ ಲಕ್ಷ್ಯವನ್ನು ತಿಳಿದುಕೊಳ್ಳಬೇಕು. ಆ ಲಕ್ಷ್ಯದ ಕಡೆಗೆ ನಮ್ಮ ಪ್ರಯತ್ನ ಇರಬೇಕು. ನಮ್ಮ ಕೆಲಸಗಳು ನಮ್ಮ ಲಕ್ಷ್ಯವನ್ನು ಸಾಧಿಸುವ ಕಡೆಗೆ ಇರಬೇಕು. ನಮ್ಮ ಕೃಷಿ ಆ ವಿಧವಾಗಿರಬೇಕು. ಅದಕ್ಕೆ ಸರಿಯಾದ ಗುರುವನ್ನು ಆಶ್ರಯಿಸಬೇಕು. ಅವರ ಮೂಲಕ ನಾವು ಮಾಡಬೇಕಾಗಿರುವುದೇನು? ಎಂದು ತಿಳಿದುಕೊಳ್ಳಬೇಕು. ಆ ಸಾಧನೆಗಳನ್ನೇ ಮಾಡಬೇಕು. ನಮ್ಮ ಸಮಯ ಶಕ್ತಿ ಜೀವನವನ್ನು ಅದಕ್ಕಾಗಿಯೇ ವಿನಯೋಗಿಸಬೇಕು. ವಿಶೇಷ ಕೃಷಿ ಮಾಡಬೇಕು. ಅದರಿಂದ ಲಕ್ಷ್ಯವನ್ನು ಸುಲಭವಾಗಿ ಸಾಧಿಸಿ, ಜೀವನವನ್ನು ಸದ್ವಿನಿಯೋಗ ಮಾಡಿಕೊಳ್ಳಬಲ್ಲೆವು.

ಜೀವನ ಲಕ್ಷ್ಯ ಸಾಧಿಸದೆ, ಜೀವನ ಗಮ್ಯ ಸೇರಿಕೊಳ್ಳಲಾರರು.. ಜೀವನ ಗಮ್ಯ ಸೇರಿಕೊಳ್ಳದಿದ್ದರೆ, ಮತ್ತೆ ಮತ್ತೆ ಭೂಮಿ ಮೇಲೆ ಬರಬೇಕು. ಜನ್ಮಗಳನ್ನು ತೆಗೆದುಕೊಳ್ಳಬೇಕು.. ಜೀವನ ಪ್ರಯಾಣ ಮುಂದುವರಿಸುತ್ತಾ ಇರಬೇಕು. ಹೀಗೆ ಎಷ್ಟು ಕಾಲ? ಎಂದರೆ ಗಮ್ಯ ಸೇರುವವರೆಗೂ... ಹಾಗಾದರೆ ನಮ್ಮ ಜೀವನ ಗಮ್ಯವೇನು? ನಮ್ಮ ಜೀವನ ಲಕ್ಷ್ಯವೇನು? ಗಮ್ಯ ಎನ್ನುವುದು ಪ್ರಯಾಣಕ್ಕೆ ಸಂಬಂಧಿಸಿದೆ. ಲಕ್ಷ್ಯ ಎನ್ನುವುದು ಸಾಧಿಸಬೇಕಾಗಿರುವ ಗುರಿ. ಆದ್ದರಿಂದ ನಮ್ಮ (ಆತ್ಮ) ಜೀವನ ಪ್ರಯಾಣದಲ್ಲಿ ಸೇರಬೇಕಾದ ಗಮ್ಯವೇನು? ನಮ್ಮ(ಆತ್ಮ) ಜೀವನದಲ್ಲಿ ಸಾಧಿಸಬೇಕಾಗಿರುವುದೇನು? ಎನ್ನುವುದನ್ನು ತಿಳಿದುಕೊಳ್ಳೋಣ.

"ಭೂಮಿ ಮೇಲೆ ಬರುತ್ತಿರುವ ನಮ್ಮ (ಆತ್ಮ) ಗಮ್ಯ ಸತ್ಯ ಲೋಕ ಸೇರುವುದು "

ಈ ಗಮ್ಯ ಅಂದರೆ, ಸತ್ಯ ಲೋಕ ಸೇರುವವರೆಗೂ ನಾವು ಮತ್ತೆ ಮತ್ತೆ ಭೂಮಿಯ ಮೇಲೆ ಬರುತ್ತಾ ಇರುತ್ತೇವೆ. ಜೀವನ ಪ್ರಯಾಣ ಮುಂದುವರೆಸುತ್ತಾ ಇರುತ್ತೇವೆ.

ಹಾಗೆ ನಮಗೇನು ನಷ್ಟ? ಎಂದುಕೊಳ್ಳಬಹುದು. ಅದಕ್ಕೆ ಆದಿಶಂಕರಚಾರ್ಯರು ಈ ವಿಧವಾಗಿ ಹೇಳಿದ್ದಾರೆ.

**ಪುನರಪಿ ಜನನಂ ಪುನರಪಿ ಮರಣಂ**
**ಪುನರಪಿ ಜನನಿ ಜಠರೆ ಶಯನಂ**
**ಇಹ ಸಂಸಾರೆ ಬಹು ದುಸ್ಸಾರೆ**
**ಕೃಪಯಾ ಪಾರೆ ಪಾಹಿ ಮುರಾರೆ!!**

**ತಾತ್ಪರ್ಯ** : ಮತ್ತೆ ಮತ್ತೆ ಹುಟ್ಟುವುದು, ಮತ್ತೆ ಮತ್ತೆ ಸಾಯುವುದು, ಮತ್ತೆ ಮತ್ತೆ ತಾಯಿಯ ಗರ್ಭದಲ್ಲಿ ಬೀಳೋದು. ಈ ವಿಧವಾದ ಹುಟ್ಟು ಸಾವುಗಳ ಸಂಸಾರ ಕಡು ದುರ್ಬರವಾಗಿದೆ. ದಯಾ ಸ್ವರೂಪನಾದವನೇ ನನ್ನನ್ನು ಕೃಪೆಯಿಂದ ರಕ್ಷಿಸು, ಕಾಪಾಡು.

ಮೇಲಿನ ಶ್ಲೋಕದ ಮೂಲಕ ಶಂಕರಚಾರ್ಯರ ಸಂದೇಶ ಏನೆಂದರೆ, ಹಾಗೆ ಹುಟ್ಟುತ್ತ ಸಾಯುತ್ತಾ ದುಃಖ ಅನುಭವಿಸುವುದಲ್ಲ, ಅಂತಹ ಜೀವನದಿಂದ ಹೊರಬರಬೇಕೆಂದು ಸಂದೇಶ ನೀಡುತ್ತಿದ್ದಾರೆ.

ಅಂದರೆ ಸತ್ತು ಹುಟ್ಟುವ ಜೀವನವೇ ಅಲ್ಲ ಹುಟ್ಟು ಸಾವುಗಳಿಲ್ಲದ ಸ್ಥಿತಿ ಹೊಂದಬೇಕೆನ್ನುವುದು ಅವರ ಸಂದೇಶ.

ಆ ಸ್ಥಿತಿ ನಮ್ಮ ಗಮ್ಯ. ಅಂದರೆ ಸತ್ಯಲೋಕ ಸೇರಿದಾಗಲೇ ಅದು ಸಾಧ್ಯವಾಗುತ್ತದೆ. ಹಾಗೆ ಸತ್ಯಲೋಕ ಸೇರಿದಾಗ, ಇನ್ನು ನಾವು ಭೂಲೋಕಕ್ಕೆ ಬರಬೇಕಾದ ಕೆಲಸ ಇರುವುದಿಲ್ಲ. ಈ ವಿಷಯವನ್ನೇ ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಭಗವಾನರು ಹೇಳಿದ್ದಾರೆ.

**ಶ್ಲೋ ॥ ಆ ಬ್ರಹ್ಮ ಭುವನಾ ಲೋಕಾ: ಪುನರಾವರ್ತಿ ನೋರ್ಜುನ ।**
**ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿಧ್ಯತೆ ॥ (ಭ.ಗೀ –16 )**

**ತಾತ್ಪರ್ಯ** : ಅರ್ಜುನ ಆ ಬ್ರಹ್ಮ ಲೋಕಗಳಂತಹ ಲೋಕಗಳಿಗೆ ಸೇರಿದರು, ಮತ್ತೆ ಭೂಲೋಕಕ್ಕೆ ಬರಲೇಬೇಕು. ಆದರೆ ನಾನಿರುವ ಲೋಕಕ್ಕೆ (ಸತ್ಯಲೋಕ) ಸೇರಿಕೊಂಡರೆ ಮತ್ತೆ ಜನಿಸಬೇಕಾಗಿರುವುದಿಲ್ಲ. ಅಂದರೆ, ಭೂಲೋಕಕ್ಕೆ ಬರಬೇಕಾದ ಅವಶ್ಯಕತೆ ಇರುವುದಿಲ್ಲ.

ಶ್ರೀಕೃಷ್ಣರು ಹೇಳಿದ ಅನುಸಾರ ನಮ್ಮ ಗಮ್ಯ ಸತ್ಯ ಲೋಕ ಎಂದು ಅರ್ಥವಾಗುತ್ತದೆ. ಅಂದರೆ ಒಂದು ವಿಧವಾಗಿ ನದಿ ಸಮುದ್ರವನ್ನು ಸೇರಿದಂತೆ, ನಾವು ಸತ್ಯ ಲೋಕದಲ್ಲಿ ಇರುವ ಪೂರ್ಣಾತ್ಮನನ್ನು ಸೇರಿಕೊಳ್ಳಬೇಕು.

# ನದಿ – ಸಮುದ್ರ

ನದಿ ಎಷ್ಟು ದೂರ ಪ್ರಯಾಣಿಸಿದರೂ, ಎಷ್ಟು ಕಾಲ ಪ್ರವಹಿಸಿದರೂ, ಎಷ್ಟು ಕಷ್ಟಗಳನ್ನು ಎದುರಿಸುತ್ತಾ ಪ್ರವಹಿಸಿದರೂ, ಎಷ್ಟು ತಿರುವುಗಳನ್ನು ತಿರುಗುತ್ತಾ, ಆತಂಕಗಳನ್ನು ಎದುರಿಸುತ್ತಾ ಕೊನೆಗೆ ತಾನು ಸಮುದ್ರಕ್ಕೆ ಸೇರುವವರೆಗೂ, ತನ್ನ ಅಸ್ತಿತ್ವ ಕಳೆದುಕೊಳ್ಳುವವರೆಗೂ, ಪ್ರಯಾಣವನ್ನು ಮುಂದುವರಿಸಲೇಬೇಕು. ಪ್ರವಹಿಸಲೇಬೇಕು, ಕಷ್ಟಗಳನ್ನು ಪಡಲೇಬೇಕು. ಸಮುದ್ರವನ್ನು ಸೇರಿದರೆ ಆ ನದಿಯ ಪ್ರಯಾಣ ಅಲ್ಲಿಗೆ ನಿಲ್ಲುತ್ತದೆ. ಅಂದರೆ ಸಮುದ್ರವನ್ನು ಸೇರುವುದು ನದಿಯ ಗಮ್ಯ.

ಹಾಗೆ ಮಾನವನ್ನು ಎಷ್ಟು ಜನ್ಮಗಳು ತೆಗೆದುಕೊಂಡು ಎಷ್ಟು ಕಾಲ ಜೀವಿಸಿದರು, ಪ್ರತಿ ಜನ್ಮದಲ್ಲೂ ಎಷ್ಟು ತೊಂದರೆಗಳು ಬಂದರೂ, ಎಷ್ಟು ದುಃಖ ಅನುಭವಿಸಿದರು, ಎಷ್ಟು ಕಷ್ಟಗಳನ್ನು ದಾಟಿ ಬಂದರೂ, ಕೊನೆಗೆ 'ನಾನು' ಅನ್ನುವ ಅಹಂಕಾರ 'ನನ್ನದು' ಎನ್ನುವ ಮಮಕಾರ ಕಳೆದುಕೊಂಡು, ಸತ್ಯಲೋಕದಲ್ಲಿನ ಪೂರ್ಣಾತ್ಮವನ್ನು ಸೇರುವವರೆಗೂ ಜೀವನ ಪ್ರಯಾಣ ಮುಂದುವರಿಸಲೇಬೇಕು. ಕಷ್ಟಪಡಬೇಕು. ಕೊನೆಗೆ ದೈವತ್ವವನ್ನು ಸಾಧಿಸಿ, ಅಂತಿಮ ಜನ್ಮದಲ್ಲಿ ಪ್ರವೇಶಿಸಿದರೂ....ರಾಮನಂತೆ, ಕೃಷ್ಣನಂತೆ, ಬುದ್ಧನಂತೆ, ಜೀಸಸ್ ನಂತೆ ಕಷ್ಟಗಳು ಅನುಭವಿಸಬೇಕು.



ನದಿ ತನ್ನ ಅಸ್ತಿತ್ವವನ್ನು ಕಳೆದುಕೊಂಡಂತೆ, ಮಾನವನು ಕೂಡ ಜೀವನ ಪ್ರಯಾಣದಲ್ಲಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಬೇಕು. ಅಂದರೆ ನಾನು, ನನ್ನದು ಎಂಬುದನ್ನು ಕಳೆದುಕೊಳ್ಳಬೇಕು ಅದಕ್ಕೆ ಧ್ಯಾನ ಮಾಡಬೇಕು.

ನೋಡಿ ನದಿಯಂತೆ ಇದ್ದರೆ ಒಂದು ಆಕಾರ ಇರುತ್ತದೆ. ಅದಕ್ಕೆ ಒಂದು ಹೆಸರು ಇರುತ್ತದೆ, ಸಮುದ್ರಕ್ಕೆ ಸೇರಿದ ಕೂಡಲೇ ಅಂದರೆ ಗಮ್ಯ ಸೇರಿದ ಕೂಡಲೇ ನಾಮರೂಪಗಳನ್ನು ಕಳೆದುಕೊಳ್ಳುತ್ತದೆ.

ಹಾಗೆ ಮಾನವನೇ ಸತ್ಯಲೋಕ ಸೇರಿದ ಕೂಡಲೇ, ಜೀವನ ಗಮ್ಯ ಸೇರಿದ ಕೂಡಲೇ, ನಾನು ನನ್ನದು ಎಂಬುದನ್ನು ಕಳೆದುಕೊಳ್ಳುತ್ತಾನೆ. ಇದಕ್ಕೆ ಮತ್ತೊಂದು ಉದಾಹರಣೆ ನೋಡೋಣ.

# ಸ್ವಗೃಹ

ಯಾರಾದರೂ ತನ್ನ ಸ್ವಗೃಹವನ್ನು ಬಿಟ್ಟು ಎಲ್ಲಿಗೆ ಹೋದರು ಸುಖ ಶಾಂತಿಗಳು ಹೊಂದಲಾರರು.ಆದರೆ ತನ್ನ ಸ್ವಗೃಹ ಸೇರಿದ ಕೂಡಲೇ, ಸುಖ ಶಾಂತಿಗಳನ್ನು ಕೊಂಡ ಬಂದರು ಅದಕ್ಕೆ ದೇಹಂತು ಇದ್ದ ಮಾನವನು ಎಲ್ಲಿಗೆ ಹೋದರು ಮತ್ತೆ ತನ್ನ ಸ್ವಗೃಹ ಸೇರಿಕೊಳ್ಳಲೇ ಬೇಕೆಂದು ನೋಡುತ್ತಾನೆ.



ಹಾಗೆ ಆತ್ಮ ತನ್ನ ಸ್ವಗೃಹವಾದ ಸತ್ಯ ಲೋಕವನ್ನು, ಋಣಾತ್ಮಕವನ್ನು ಬಿಟ್ಟು ಯಾವ ಲೋಕವನ್ನು ಸೇರಿದರು ಶಾಶ್ವತ ಸ್ಥಾಯಿ ಹೊಂದಲಾರದು ಮಧ್ಯ ತನ್ನ ಸ್ವಗೃಹವಾದ ಸತ್ಯ ಲೋಕ ಸೇರಿದಾಗಲೇ ಶಾಶ್ವತ ಶಾಂತಿಯನ್ನು ಹೊಂದುತ್ತದೆ ಅದೇ ಆತ್ಮದ ಲಕ್ಷ್ಯ ಎಂದರೆ ಮಾನವ ಜೀವನ ಲಕ್ಷ್ಯವೂ ಅದೇ...

ಆತ್ಮ ಯಾವಾಗಲೂ ಆಕಾಂಕ್ಷಿಸುವುದು ಮತ್ತೆ ತನ್ನ ಸ್ವಗೃಹವನ್ನು ಸೇರಿಕೊಳ್ಳಬೇಕೆಂದೆ.

ಹಾಗೂ ನಮ್ಮ ಗಮ್ಯ ಯಾವಾಗ ಸೇರಿಕೊಳ್ಳುತ್ತೇವೆ ಅಂದರೆ ನಮ್ಮ ಜೀವನ ನಕ್ಷೆಯನ್ನು ಸಾಧಿಸಿದಾಗ ಮತ್ತೆ ನಮ್ಮ ಜೀವನದ ಲಕ್ಷ್ಯವೇನು? ಒಬ್ಬ ಶ್ರೀ ಕೃಷ್ಣಭಗವಾನರಂತೆ, ಬುದ್ಧನಂತೆ, ಜೀಸಸ್, ಮಹಮದ್, ಮಹಾವೀರರಂತೆ, ಬ್ರಹ್ಮರ್ಷಿ ಪತ್ರೀಜಿಯವರಂತೆ, ಪೂರ್ಣಾತ್ಮ ವಾಗುವುದು. ಆಗಲೇ ನಾವು ಅವರಂತೆ ಸತ್ಯ ಲೋಕವನ್ನು ಸೇರಿಕೊಳ್ಳುತ್ತೇವೆ.

ಇನ್ನು ನಾವು ಮತ್ತಷ್ಟು ವಿಷಯಗಳನ್ನು ತಿಳಿದುಕೊಳ್ಳಬೇಕು. ಹಾಗೆ ಪೂರ್ಣಾತ್ಮವಾಗಿ ತಯಾರಾದವರನ್ನು ಕೊ–ಕ್ರಿಯೇಟರ್ಸ್, ಸೃಷ್ಟಿಕರ್ತರು ಎನ್ನುತ್ತಾರೆ. ಅವರು ತಮ್ಮಿಂದ ಕೆಲವು ಅಂಶಗಳನ್ನು ಸೃಷ್ಟಿಸಿ, ಈ ಅಂಶಗಳನ್ನು ಅಂದರೆ ಅಂಶಾತ್ಮಗಳನ್ನು ಒಂದು ಜೀವಿಯಲ್ಲಿ ಅಂದರೆ ಶರೀರದಲ್ಲಿ ಪ್ರವೇಶಿಸುವಂತೆ ಮಾಡುತ್ತಾರೆ. ಹಾಗೆ ಶರೀರದಲ್ಲಿ ಪ್ರವೇಶಿಸಲ್ಪಟ್ಟ ಅಂಶಾತ್ಮವನ್ನು 'ಜೀವಾತ್ಮ' ಅಥವಾ 'ಮಾನವ' ಎನ್ನುತ್ತಾರೆ.

ಈ ಮಾನವನಿಗೆ ಸೃಷ್ಟಿಸಿದ ಪೂರ್ಣಾತ್ಮ, ಒಂದು ಲಕ್ಷ್ಯವನ್ನು ನಿರ್ದೇಶಿಸುತ್ತದೆ. ಅದೇನೆಂದರೆ, 'ನೀನು ಕೂಡ ನನ್ನಂತೆ ನನ್ನ ಸ್ಥಾಯಿಗೆ ಬರಬೇಕು' ಎಂದು..., ಅಂದರೆ

ಪೂರ್ಣಾತ್ಮನಾಗಬೇಕು ಹಾಗೆ ಪೂರ್ಣಾತ್ಮನಾಗುವವರೆಗೂ ನೀವು ಜನ್ಮಗಳನ್ನು ತೆಗೆದುಕೊಳ್ಳುತ್ತಲೇ ಇರಬೇಕು. ನನ್ನ ಸ್ಥಾಯಿಗೆ ಬಂದ ನಂತರ... ಅಂದರೆ, ಪೂರ್ಣಾತ್ಮವಾಗಿ ಸಾಧನೆ ಮಾಡಿದ ನಂತರ ನನ್ನನ್ನು ಸೇರಿಕೊಳ್ಳುವೆ. ಅಂದರೆ ನಾನಿರುವ ಸತ್ಯ ಲೋಕಕ್ಕೆ ಸೇರಿಕೊಳ್ಳುವೆ. ಆಗ ನಿನಗೆ ಇನ್ನೂ ಜನ್ಮಗಳು ತೆಗೆದುಕೊಳ್ಳಬೇಕಾದ ಅಗತ್ಯವಿರುವುದಿಲ್ಲ. ಎಂದು ಪೂರ್ಣಾತ್ಮ ಮಾನವನಿಗೆ ಲಕ್ಷ್ಯವನ್ನು ನಿರ್ದೇಶಿಸುತ್ತದೆ.

ಇನ್ನು ಒಂದು ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ತಾಯಿ ಎಷ್ಟು ಮಂದಿ ಮಕ್ಕಳನ್ನು ಹೆತ್ತರು ತಾಯಿಯಂತೆ ಇರುತ್ತಾಳೆ. ಸ್ವಲ್ಪ ಸವೆಯುವುದಿಲ್ಲ. ಹಾಗೆ ಪೂರ್ಣಾತ್ಮ ದಿಂದ ಎಷ್ಟು ಅಂಶಗಳು ಹೊರಬಂದರೂ, ಪೂರ್ಣಾತ್ಮ ಪೂರ್ಣವಾಗಿಯೇ ಇರುತ್ತದೆ. ಸ್ವಲ್ಪವೂ ಕಡಿಮೆಯಾಗುವುದಿಲ್ಲ. ಒಂದು ವಿಧವಾಗಿ ಪೂರ್ಣಾತ್ಮ, ಅಂಶಾತ್ಮ ಎರಡು ಒಂದೇ...

ಅದಕ್ಕೆ **ದಶಾವತಾರಗಳನ್ನು** ಅಂದರೆ ಶ್ರೀರಾಮ, ಶ್ರೀ ಕೃಷ್ಣ, ಬುದ್ಧರು, ವಿಷ್ಣುಮೂರ್ತಿಯ ಒಂದು ಅಂಶಗಳೆಂದು ಹೇಳಿಕೊಳ್ಳುತ್ತೇವೆ. ಅಂದರೆ ವಿಷ್ಣುಮೂರ್ತಿಯಾಗಿಯೇ ಹೇಳಿಕೊಳ್ಳುತ್ತೇವೆ. ಹಾಗೆ ಶಿರಡಿ ಬಾಬಾರನ್ನು ಶಿವನ ಅಂಶವಾಗಿ ಹೇಳುತ್ತಾರೆ. ಬಾಬಾರವರೆ ಶಿವ ಎಂದು ಕೂಡ ಹೇಳುತ್ತಾರೆ.

ಹಾಗೆಯೇ ತಾಯಿಯಿಂದ ಜನಿಸಿದ ಮಗು ಮತ್ತೆ ತಾನು ತಾಯಿಯಾಗಿ ತಾನು ಕೂಡ ಮಕ್ಕಳನ್ನು ಹೆರುತ್ತಾಳೋ, ಹಾಗೆ ಪೂರ್ಣವಾಗಿರುವ ಆತ್ಮದಿಂದ ಬೇರ್ಪಟ್ಟ ಅಂಶವು 'ವಿದ್ಯೆ'ಯಿಂದ ಅಂದರೆ 'ಜ್ಞಾನ' ದಿಂದ ತಾನು ಕೂಡ ಪೂರ್ಣಾತ್ಮವಾಗುತ್ತದೆ. ತನ್ನ ಜೀವಲಕ್ಷ್ಯವನ್ನು ಸಾಧಿಸುತ್ತದೆ. ಮತ್ತೆ ತಾನು ಕೂಡ ಪೂರ್ಣಾತ್ಮ ಪಾತ್ರವನ್ನು ಪೋಷಿಸುತ್ತದೆ. ಮತ್ತೆ ತಾನು ಕೂಡ ಅಂಶಾತ್ಮರನ್ನು ಸೃಷ್ಟಿಸುತ್ತದೆ.

ಈ ವಿಷಯವನ್ನೇ ಈಶಾವಾಸ್ಯ ಉಪನಿಷತ್ತಿನಲ್ಲಿ ಹೇಳಲಾಗಿದೆ.

**ಓಂ ಪೂರ್ಣ ಮದ: ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೆ ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೆ॥**

**ತಾತ್ಪರ್ಯ** : ಪೂರ್ಣ ಅಂದರೆ ಪೂರ್ಣಬ್ರಹ್ಮ. ಇದು ಪೂರ್ಣ (ಇದು ಅಂದರೆ ಪೂರ್ಣಾತ್ಮದಿಂದ ಬೇರ್ಪಟ್ಟು ಜೀವಾತ್ಮನಲ್ಲಿ ಪ್ರವೇಶಿಸಿದ ಜೀವಾತ್ಮ) ಅಂದರೆ ಜೀವಾತ್ಮ ಕೂಡ ಪೂರ್ಣವೇ. ಆ ಪೂರ್ಣ ವಸ್ತುವಿನಿಂದ, ಬ್ರಹ್ಮನಿಂದ ಈ ಪೂರ್ಣ ವಸ್ತು ಅಂದರೆ 'ಮಾನವ' ಉಂಟಾಗಿದ್ದಾನೆ. ಈ ಪೂರ್ಣ ವಸ್ತು ಅಂದರೆ ಮಾನವನು ವಿದ್ಯೆಯಿಂದ

(ಜ್ಞಾನದಿಂದ) ಪೂರ್ಣತ್ವವನ್ನು ಸಾಧಿಸಿದ ಪಕ್ಷದಲ್ಲಿ ಪೂರ್ಣವಾದ ಪರಮಾತ್ಮವಾಗಿ ಉಳಿಯುತ್ತದೆ ಅಂದರೆ ಬ್ರಹ್ಮವಾಗಿ ರಾರಾಜಿಸುತ್ತದೆ. ಅಂದರೆ ಪೂರ್ಣಾತ್ಮವಾಗಿ



ತಯಾರಾಗುತ್ತದೆ. ಸಹ ಸೃಷ್ಟಿಕರ್ತ (ಕ್ರೋಕ್ರಿಯೇಟರ್) ನಾಗುತ್ತದೆ.

ಆದ್ದರಿಂದ ನಾವು ದೇಹಧಾರಿಗಳಲ್ಲ, ದೇಹದಲ್ಲಿರುವ ದೇಹಿಗಳು. ಅಂದರೆ ಜೀವಿಗಳು ಅಂದರೆ ಆತ್ಮರು. ನಮ್ಮ ಲಕ್ಷ್ಯ ಪೂರ್ಣ ಜ್ಞಾನವನ್ನು ಸಂಪಾದಿಸಿಕೊಂಡು ಪೂರ್ಣಾತ್ಮವಾಗುವುದು. ನಮ್ಮ ಗಮ್ಯವಾದ ಸತ್ಯಲೋಕವನ್ನು ಸೇರುವುದು. ಸಹ ಸೃಷ್ಟಿಕರ್ತರಾಗಿರುತ್ತಾ, ಸೃಷ್ಟಿಕರ್ತ ಮಾಡುತ್ತಿರುವ ಕೆಲಸಗಳನ್ನು ಮಾಡುವುದು ನಮ್ಮ ಕೆಲಸ.

ಅದಕ್ಕೆ ಈಶಾವಾಸ್ಯ ಉಪನಿಷತ್ತಿನ ಶಾಂತಿಮಂತ್ರದಲ್ಲಿ 'ಆದಿ' ಅಂದರೆ, ಸೃಷ್ಟಿಕರ್ತ ಪೂರ್ಣವೇ; ಸೃಷ್ಟಿಕರ್ತನಿಂದ ಬೇರ್ಪಟ್ಟ ಮಾನವನಾಗಿ ಬದಲಾದ ಅಂಶವೂ ಕ ಪೂರ್ಣವೆಂದು ಹೇಳಲಾಗಿದೆ. ಅಷ್ಟೇ ಅಲ್ಲ ಮಾನವನು ತಾನು ಜ್ಞಾನಗಳಿಂದ, ವಿದ್ಯೆಗಳಿಂದ ಪೂರ್ರ್ಣತ್ವವನ್ನು ಹೊಂದಿದ ಪಕ್ಷದಲ್ಲಿ ತಾನು ಕೂಡ ಪೂರ್ಣವಾಗಿಯೇ ಇರುತ್ತದೆ. ಅಂದರೆ, ಉಳಿಯುತ್ತದೆ ಎಂದು ಹೇಳಲಾಗಿದೆ.

ಮಾನವನಿಗೆ ಆ ವಿದ್ಯೆ ಅಂದರೆ, ಜ್ಞಾನ ಹೇಗೆ ಲಭಿಸುತ್ತದೆ? ಈ ವಿಷಯವನ್ನೇ, ಪೂರ್ಣಾತ್ಮ ಸ್ಥಿತಿಗೇರಿದ ಬ್ರಹ್ಮರ್ಷಿಗಳಾದ ವಶಿಷ್ಠರು, ಶಂಕರಾಚಾರ್ಯರಂತಹವರು ಹೇಳಿದ್ದಾರೆ. ಅವರು ಏನು ಹೇಳಿದ್ದಾರೆಂದರೆ, ಯಾರಾದರೆ 1) ಧ್ಯಾನಸಾಧನೆ 2) ಸ್ವಾಧ್ಯಾಯ (ಜ್ಞಾನವಂತರ ಪುಸ್ತಕಗಳನ್ನು ಓದುವುದು). 3) ಸಾಂಗತ್ಯ (ಆತ್ಮ ಜ್ಞಾನಿಗಳ ಬೋಧೆಯನ್ನು ಕೇಳುವುದು) ವಿಶೇಷವಾಗಿ ಮಾಡುವರೋ, ಅನತಿಕಾಲದಲ್ಲೇ ಪೂರ್ಣ ಜ್ಞಾನವನ್ನು ಹೊಂದಿ ಜೀವನ ಲಕ್ಷ್ಯವಾದ ಪೂರ್ಣಾತ್ಮವಾಗುತ್ತಾರೆ ಎಂದು ಹೇಳಲಾಗಿದೆ.

ಈ ವಿಷಯವನ್ನು ನಮ್ಮ ಬ್ರಹ್ಮಶ್ರೀ ಪತ್ರೀಜಿ ಕೂಡ ಹೇಳುತ್ತಿದ್ದಾರೆ. ಆದ್ದರಿಂದ ನಮ್ಮ ಜೀವನ ಲಕ್ಷ್ಯ: ಖಾನ, ಪೀನ, ಸೋನ ಅಲ್ಲ. ಸಾಧನೆ ಸ್ವಾಧ್ಯಾಯ, ಸಾಂಗತ್ಯಗಳ ಮೂಲಕ ಪೂರ್ಣಾತ್ಮರಾಗಬೇಕೆಂದು ತಿಳಿದುಕೊಳ್ಳೋಣ. ಅನುನಿತ್ಯ ಧ್ಯಾನ ಸಾಧನೆಯ ಮಾಡೋಣ.

ಆತ್ಮರಾದ ನಾವು ಅಭಿವೃದ್ಧಿ ಹೊಂದುವುದು ಏತಕ್ಕೆ? ಎಂದರೆ ಗಮ್ಯವನ್ನು ಸೇರಲು, ಲಕ್ಷವನ್ನು ಸಾಧಿಸಲು.

ನಾವು ಪೂರ್ಣಾತ್ಮನಿಂದ ಬಂದಿದ್ದೇವೆ. ಲಕ್ಷ್ಯ ಪೂರ್ತಿಯಾಗುವವರೆಗೂ ಜನ್ಮಗಳು ತಪ್ಪುವುದಿಲ್ಲ ಎಂದು ನೆನಪಿಟ್ಟುಕೊಳ್ಳಬೇಕು. ಆದ್ದರಿಂದ ಲಕ್ಷ್ಯವನ್ನು ಸಾಧಿಸಿ ಗಮ್ಯವನ್ನು ಸೇರಿಕೊಳ್ಳಬೇಕು.

ಇಂತಹ ಜ್ಞಾನವನ್ನು ಧ್ಯಾನ ಮಾರ್ಗವನ್ನು ನಮಗೆ ನೀಡಿದ ಬ್ರಹ್ಮರ್ಷಿಪತ್ರಿಗೆ ಧನ್ಯವಾದಗಳು. ಇಲ್ಲದಿದ್ದರೆ ನಾವೆಲ್ಲರೂ ಗಮ್ಯವರಿಯದ ದಾರಿಹೋಕರು.. ಪತ್ರೀಜಿ ಎಷ್ಟೋ ಜನರಿಗೆ ಈ ಜ್ಞಾನವನ್ನು ತಿಳಿಸಿದ್ದಾರೆ. ಇಲ್ಲದಿದ್ದರೆ ನಾವು ಮತ್ತೆ ಮತ್ತೆ ಜನ್ಮಗಳು ತೆಗೆದು ಕೊಳ್ಳಬೇಕಾಗುವುದಲ್ಲದೆ, ತಳೆದ ಜನ್ಮಗಳನ್ನು ವ್ಯರ್ಥ ಮಾಡಿಕೊಳ್ಳಬೇಕಿತ್ತು

ಆದ್ದರಿಂದ ತಿಳಿದುಕೊಳ್ಳಿ ಈ ಜೀವನವೆನ್ನುವುದು ಸಂಪಾದಿಸಲು, ಸಂಸಾರವನ್ನು ಪೋಷಿಸಿಕೊಳ್ಳಲು, ಸುಖಗಳನ್ನು ಅನುಭವಿಸಲು ದುಃಖದೊಳಗಿಂದ ಕಷ್ಟಗಳಿಂದ ಹೊರಬರುವ ಪ್ರಯತ್ನ ಮಾಡುತ್ತಾ ಜೀವನ ಮುಗಿಸಿಕೊಳ್ಳುವುದಕ್ಕಲ್ಲ. ಹಾಗೇ ಜೀವಿಸುವುದು ನಮ್ಮ ಲಕ್ಷ್ಯವಲ್ಲ ಮರಣಿಸುವುದು ನಮ್ಮ ಜೀವನ ಗಮ್ಯವಲ್ಲ.

ಈ ಜೀವನಕ್ಕೆ ಗಮ್ಯವಿದೆ, ಲಕ್ಷ್ಯವಿದೆ ಆದ್ದರಿಂದ ದಿಶೆಯಾಗಿ ಪ್ರಯತ್ನಿಸಬೇಕು, ಸಾಧಿಸಬೇಕು. ಪ್ರಯತ್ನಿಸಿ ಸಾಧಿಸಿದವರು ಉನ್ನತ ಸ್ಥಿತಿಯನ್ನು ಹೊಂದಿದವರು. ಅಂತಹವರು ಜೀವನವನ್ನು ಸದ್ವಿನಿಯೋಗ ಮಾಡಿಕೊಂಡವರಾಗುತ್ತಾರೆ.

ಇದೆಲ್ಲಾ ಇನ್ನೂ ಚೆನ್ನಾಗಿ ಅರ್ಥವಾಗಬೇಕೆಂದರೆ, ಆಧ್ಯಾತ್ಮಿಕ ತ್ರಿರತ್ನಗಳಾದ 1) ಧ್ಯಾನ ಸಾಧನೆ. 2) ಜ್ಞಾನಿಗಳ ಪುಸ್ತಕ ಸ್ವಾಧ್ಯಾಯ ಮಾಡುವುದು. 3) ಜ್ಞಾನಿಗಳೊಂದಿಗೆ ಸಾಂಗತ್ಯ ಮಾಡಬೇಕು. ಪತ್ರೀಜಿ ಮಾರ್ಗದಲ್ಲಿ ನಡೆಯಬೇಕು.

# "ಸಾಂಖ್ಯ ಯೋಗ... ಪಂಚ ವಿಂಶತಿ"

**"ವಿಂಶತಿ"= "ನೂರರಲ್ಲಿ ಐದನೆಯ ಭಾಗ"**

**"ಪಂಚ "= "ಐದು "**

ಆದ್ದರಿಂದ "ಪಂಚ ವಿಂಶತಿ " ಎಂದರೆ "ಇಪ್ಪತ್ತೈದು. "

ಪ್ರಕೃತಿ ಪುರುಷರ ಸಂಯೋಗವೇ "ಸೃಷ್ಟಿ" = "25 ತತ್ವಗಳು"

ಈ "ಸೃಷ್ಟಿ" ಸಮಸ್ತವೂ ಇಪ್ಪತ್ತೈದು ತತ್ವಗಳೊಂದಿಗೆ ಕೂಡಿದೆ.

ಪುರುಷ ಅಂದರೆ ಮೂಲ ಚೈತನ್ಯದ ಭಾಗ ಅಂದರೆ "ಮಾನವ", " ಜೀವಾತ್ಮ" ಅಥವಾ "ಅಂಶಾತ್ಮ" ಎಂದರ್ಥ

ಮಾನವ = ಪುರುಷನು+ ಕಾರಣಶರೀರ + ಸೂಕ್ಷ್ಮಶರೀರ ಸ್ಥೂಲಶರೀರ

. 25=1+2+17+5

. **"ಪುರುಷನ" ಸಂಖ್ಯೆ = "ಒಂದು"**

"ಪ್ರಕೃತಿ" ಇಪ್ಪತ್ನಾಲ್ಕು ತತ್ವಗಳೊಂದಿಗೆ ಕೂಡಿದೆ.

ಪ್ರಕೃತಿಯಲ್ಲಿ ಪ್ರವೇಶಿಸುತ್ತಾ ಮಾನವ ಮೂರು ಶರೀರಗಳನ್ನು ಧರಿಸುತ್ತಾನೆ.

ಕಾರಣ ಶರೀರ (2 ) ಸೂಕ್ಷ್ಮಶರೀರ ( 17 )

ಸ್ಥೂಲಶರೀರ (5 )

ಕಾರಣ ಶರೀರದ ಸಂಖ್ಯೆ= ಎರಡು = 2= "ಮನಸ್ಸು" + "ಅಹಂಕಾರ"

ಸೂಕ್ಷ್ಮ ಶರೀರದ ಸಂಖ್ಯೆ = 5+5+5+1+1=17

ಸೂಕ್ಷ್ಮ ಶರೀರ= ಪಂಚ ತನ್ಮಾತ್ರಗಳು – 5+ ಪಂಚ ಜ್ಞಾನೇಂದ್ರಿಯಗಳು –5 + ಪಂಚ ಕರ್ಮೇಂದ್ರೀಯಗಳು – 5 + ಮನಸ್ಸು –1+ ಬುದ್ಧಿ –1

"ತನ್ಮಾತ್ರಗಳು " ಎಂದರೆ ಪಂಚ ಮಹಾಭೂತಗಳ ಸೂಕ್ಷ್ಮ ರೂಪಗಳು ಸ್ಥೂಲ ಶರೀರದ ಸಂಖ್ಯೆ 5. ಅವೇ ಪಂಚ ಮಹಾಭೂತಗಳು.

ಆದ್ದರಿಂದ ಈ ಭೌತಿಕ ಲೋಕದಲ್ಲಿ ಭೌತಿಕ ಶರೀರ ಧಾರಿಯಾದ ಮಾನವನ ಸಂಖ್ಯೆ =25

**"ಪಂಚ ವಿಂಶತಿ = 25"**

ಮನುಷ್ಯ ಭೌತಿಕವಾಗಿ ಮರಣಿಸಿದಾಗ ಆತನ ಸಂಖ್ಯೆ 25–5–=20

ಸೂಕ್ಷ್ಮ ಲೋಕದಿಂದ ಕಾರಣಲೋಕಗಳಿಗೆ ಹೋದಾಗ ಆತನ ಸಂಖ್ಯೆ 20–17=3

ಆತ್ಮಜ್ಞಾನ ಹೊಂದಿದಾಗ – ಅಂದರೆ ಅಹಂಕಾರ ನಶಿಸಿ ಚಿತ್ತವು ಪರಿಶುದ್ಧವಾದಾಗ ಆತನ ಸಂಖ್ಯೆ . "3–2 = 1" ಆಞುತ್ತದೆ.

ಆಗ ಹಾಯಾಗಿ... ಅದ್ವೈತನಾಗಿ, ಪುರುಷೋತ್ತಮನಾಗಿ, ಪರಮಾತ್ಮನಾಗಿ... ಶಾಶ್ವತವಾಗಿ ವಿರಾಜಿಸುತ್ತಾನೆ.

ಇದೇ "ಕಪಿಲ ಮಹಾಮುನಿ" ಪ್ರಣಿತ "ಸಾಂಖ್ಯಯೋಗ" ಸಾರಾಂಶ

# ಅನುಬಂಧ

"ಆಧ್ಯಾತ್ಮಿಕ ವಿಜ್ಞಾನ ಶಾಸ್ತ್ರ– ಆರು ಸಿದ್ಧಾಂತಗಳು"

**" ಆತ್ಮ ಸಿದ್ಧಾಂತ "**

ನಾವು ಆತ್ಮಸ್ವರೂಪರು ಮಹಾಕಾರಣ ಲೋಕದಲ್ಲಿನ, ಒಂದಾನೊಂದು ಪೂರ್ಣಾತ್ಮದ ಒಂದು ಅಂಶಾತ್ಮವೇ ನಾವು.

**"ಜನ್ಮ– ಪುನರ್ಜನ್ಮ ಸಿದ್ಧಾಂತ "**

ಮೊದಲ ಬಾರಿ ಅಂಶಾತ್ಮ ಒಂದು ಭೌತಿಕ ಶರೀರವನ್ನು ಆಯ್ಕೆ ಮಾಡಿಕೊಂಡು ಈ ಭೂಮಿಯ ಮೇಲೆ ಜನ್ಮ ತೆಗೆದುಕೊಂಡಾಗ, ಅದೇ ಮೊದಲ ಜನ್ಮ.... ಅದೇ ರೀತಿಯಾಗಿ ಆತ್ಮವು ಮತ್ತೆ ಮತ್ತೆ ಜನ್ಮಗಳನ್ನು ತೆಗೆದುಕೊಳ್ಳುವುದೇ.... "ಪುನರ್ಜನ್ಮಗಳು" ಎನ್ನುತ್ತಾರೆ.

ವಿವಿಧ ರೀತಿಯ ಭೌತಿಕ ಜನ್ಮಗಳ ಅನುಭವಗಳಿಗಾಗಿ, ಸ್ವ–ಇಚ್ಛೆಯಿಂದ ಈ ಭೂಮಿಯ ಮೇಲೆ ಆತ್ಮಗಳು ಬಂದು ಹೋಗುತ್ತಾ ಇರುತ್ತವೆ.

**" ಕರ್ಮ – ಕರ್ಮಫಲ ಸಿದ್ಧಾಂತ "**

ನಾವು ಮಾಡುವ ಯಾವ ವಿಧವಾದ ಕರ್ಮವಾದರೂ, ಸಮಯ ಸಂದರ್ಭಕ್ಕೆ ಅನುಸಾರವಾಗಿ ಆ ಕರ್ಮಕ್ಕೆ ತಕ್ಕ ಪ್ರತಿಫಲವು ನಮಗೆ ಸಿಗುತ್ತದೆ.

" ಏನು ಬಿತ್ತುವೆವೋ ಅದನ್ನೇ ಪಡೆಯುತ್ತೇವೆ "

**"ಪುರೋಗಮನ ಸಿದ್ಧಾಂತ"**

ಪ್ರತಿ ಭೌತಿಕ ಅನುಭವವೂ ಒಂದೊಂದು ಆನಂದವನ್ನು ದುಃಖವನ್ನು ನೀಡಿದರು, ಒಂದಾನೊಂದು ನಿರ್ದಿಷ್ಟ ಜ್ಞಾನವನ್ನು ಮಾತ್ರ ಕಡ್ಡಾಯವಾಗಿ ಪ್ರಸಾದಿಸುತ್ತದೆ... ಆದ್ದರಿಂದ ಎಲ್ಲಿಯಾದರೂ, ಯಾವಾಗಲಾದರೂ, ಯಾವ ಕ್ಷಣವಾದರೂ, ಹಾಗೂ ಯಾವ ಪರಿಸ್ಥಿತಿಯಲ್ಲಾದರೂ ಆತ್ಮಕ್ಕೆ ಪುರೋಗಮನವೇ!

## "ಯೋಗ ಸಿದ್ದಾಂತ"

ಅನೇಕ ಕರ್ಮಗಳನ್ನು ಆಚರಿಸುತ್ತಾ, ಅನೇಕ ಅನುಭವಗಳನ್ನು ಪಡೆಯುತ್ತಾ, ಪುರೋಗಮನ ದಿಶೆಯತ್ತ ಪ್ರಯಾಣಿಸುತ್ತಾ, ಆತ್ಮ ತನ್ನ ಪುರೋಗಮನವನ್ನು ಮತ್ತಷ್ಟು ವೇಗವಂತವಾಗಿ ಮಾಡಿಕೊಳ್ಳಲು ಕೈಗೊಳ್ಳುವ ಕ್ರಿಯೆಯೇ  "ಯೋಗ ಸಾಧನೆ". "ಧ್ಯಾನ ಯೋಗ" "ಸ್ವಾಧ್ಯಾಯ ಯೋಗ" ಹಾಗೂ "ಸಜ್ಜನ ಸಾಂಗತ್ಯಯೋಗ" ಎನ್ನುವುದು ಇದಕ್ಕೆ ಕೆಲವು ಉದಾಹರಣೆಗಳು.

## "ಅನೇಕಾನೇಕ ಸಿದ್ಧಾಂತ"

ಸೃಷ್ಟಿಯಲ್ಲಿ ಪುಂಖಾನುಪುಂಖವಾಗಿ, ಕವಲುಗಳಾಗಿ, ಅನೇಕಾನೇಕ ಲೋಕಗಳು,  ಅನೇಕಾನೇಕ ಜೀವಿಗಳು, ಅನೇಕಾನೇಕ ಅನುಭವ ಜ್ಞಾನಗಳು ಹಾಗೂ ಅನೇಕಾನೇಕ ಆವಗಾಹನಾ ಕೋನಗಳು ಇವೆ ; ಇವುಗಳೇ ದಿವ್ಯ ಚಕ್ಷುವಿನ ಮೂಲಕ ತಿಳಿದುಕೊಳ್ಳುವ ಸತ್ಯಗಳು .

"ಆತ್ಮದ ನಿಜ ವಾದ ಕಥೆ"

ಆತ್ಮ ಎನ್ನುವುದು.... ಆದಿ ಅಂತ್ಯವಿಲ್ಲದ್ದು.

ಆತ್ಮ ಎಂದರೆ.... ಭೌತಿಕತೆಯಲ್ಲ

ಆತ್ಮ ಎನ್ನುವುದು.... ಮೂಲ ಚೈತನ್ಯದ ಒಂದು "ಅಂಶವಲ್ಲದ ಅಂಶ"

ಆತ್ಮ ಎನ್ನುವುದು.... ಭೌತಿಕ ರೂಪಗಳು ಇಲ್ಲದಿರುವುದು.

ಆತ್ಮ ಎನ್ನುವುದು.... ಕೇವಲ "ಅನುಭವ ರೇಖೆಗಳು" ಹೊಂದಿರುವುದು.

ಆತ್ಮಕ್ಕೆ... ಭೌತಿಕ ಭಾರವಿಲ್ಲ.

ಆತ್ಮ...  ಅನುಭವದ ಭಾರ ಹೊಂದಿದೆ.

ಆತ್ಮ ಎನ್ನುವುದು... ಒಂದಾನೊಂದು ಕೋರಿಕೆಗಳ ಹುತ್ತ.

ಆತ್ಮದ ಹಂಬಲ ಯಾವಾಗಲೂ ನೂತನ ಅನುಭವಗಳಿಗಾಗಿಯೇ..

ಆತ್ಮದ ಒಂದು ಹಂಬಲ ಯಾವಾಗಲೂ ಭಿನ್ನ ವಿಭಿನ್ನ ಅನುಭವಗಳಿಗಾಗಿ...

ಆತ್ಮಕ್ಕೆ ಎಲ್ಲಾ ಪರಿಸ್ಥಿತಿಗಳು ಆಸೆಯನ್ನು ಹುಟ್ಟಿಸುವಂತಹುದೇ...

ಆತ್ಮವು... ಯಾವಾಗಲೂ "ಎಲ್ಲಾ ಪರಿಸ್ಥಿತಿಗಳನ್ನು ಅವಗಾಹನೆ ಮಾಡಿಕೊಳ್ಳಬೇಕು" ಎನ್ನುವ ಆತುರತೆಯಿಂದ ಇರುತ್ತದೆ.

ಆತ್ಮಕ್ಕೆ ಸೋಲು ಎನ್ನುವುದೇ ಇಲ್ಲ ಒಂದು ಆತ್ಮಹತ್ಯೆ ಮಾಡಿಕೊಂಡಾಗ ಹೊರತು.

(ಆತ್ಮಹತ್ಯೆ ಮಹಾ ಪಾಪ ಎಂದು ಹೇಳಲಾಗಿದೆಯಲ್ಲವೇ ಇದು ಆತ್ಮ ಜ್ಞಾನ ರಹಿತರೆಲ್ಲರಿಗೂ, ಕಡ್ಡಾಯವಾಗಿ ವಿವಿಧ ಕ್ರಮವಾಗಿ ಅನ್ವಯಿಸುತ್ತದೆ ಆದರೆ ಒಂದಾನೊಂದು ಆತ್ಮವಿಜ್ಞಾನಿಗೆ ಬ್ರಹ್ಮಜ್ಞಾನಿಗೆ ಬ್ರಹ್ಮ ಹತ್ಯಾಪಾಪ ಇರುವುದಿಲ್ಲ ಆತ್ಮಹತ್ಯಾ ಪಾಪವಿಲ್ಲ).

ಆತ್ಮಕ್ಕೆ ಇರುವುದೆಲ್ಲ ಗೆಲುವೇ... ಆತ್ಮಕ್ಕೆ ಇರುವುದೆಲ್ಲ ನಿತ್ಯನೂತನತ್ವವೇ

ಒಂದಾನೊಂದು ಆತ್ಮ ಒಂದಾನೊಂದು ಮಾನವ ಶರೀರ ಧಾರಣೆ ಮಾಡಿದಾಗ...

ಒಂದಾನೊಂದು ಜೀವನ ಪರಿಸ್ಥಿತಿಯನ್ನು ಎದಿರಿಸುತ್ತದೆ.

ಆ ನಂತರ... ಮತ್ತೆ ವಿವಿಧ ರೀತಿಯ ಜೀವನ ಪರಿಸ್ಥಿತಿಗಳನ್ನು ಅನುಭವಿಸಲು ಹಂಬಲಿಸುತ್ತದೆ.

ಮಾನವ ಜೀವನ ಪರಿಸ್ಥಿತಿಗಳೆಲ್ಲವನ್ನು ಅವಗಾಹನೆ ಮಾಡಿಕೊಳ್ಳಲು ಆತ್ಮಕ್ಕೆ ಕನಿಷ್ಠವಾದರೂ, ನಾಲ್ಕು ನೂರು ಜನ್ಮಗಳ ಅಶ್ಯತ್ಯವಿರುತ್ತದೆ.

ಹಾಗೂ ನಾಲ್ಕುನೂರು ಜನ್ಮಗಳಲ್ಲಿ ಮುಳುಗಿ ತೇಲಿದ ಆತ್ಮ ಒಂದಾನೊಂದು 'ಅನುಭವಗಳ ಮೂಟೆ'ಯಾಗಿ ತಯಾರಾಗುತ್ತದೆ.

ಅನೇಕ ಬಾರಿ ಜನಿಸಿ, ಅಂದರೆ ಅನೇಕ ಬಾರಿ ಶರೀರದಲ್ಲಿ ಸೇರಿ, ಅನೇಕ ಬಾರಿ ಮರಣಿಸಿ ಅಂದರೆ, ಅನೇಕ ಬಾರಿ ಶರೀರದಿಂದ ಹೊರ ಬಂದು, ಅನೇಕ ವಿಧವಾದ ಅವಮಾನ, ದುಃಖ, ತಿರಸ್ಕಾರಾದಿಗಳನ್ನು ಸಹಿಸಿ

ಅನೇಕ ಬಾರಿ ಮರಣಿಸಿ... ಅಂದರೆ ಶರೀರದಿಂದ ಹೊರಬಂದು, ಅನೇಕ ಬಾರಿ ಮಾನ – ಸುಖ – ಪುರಸ್ಕಾರಾದಿಗಳನ್ನು ಅನುಭವಿಸಿ

ಒಂದಾನೊಂದು ಸಂಪೂರ್ಣ 'ಜ್ಞಾನದ ಮೂಟೆ'ಯಾಗಿ ತಯಾರಾಗುತ್ತದೆ.

ಪ್ರತಿ ಅನುಭವವೂ ಆತ್ಮಕ್ಕೆ ಒಂದಾನೊಂದು ವಿಶಿಷ್ಟ ಜ್ಞಾನಸಾರವನ್ನು ಪ್ರಸಾದಿಸುತ್ತದೆ.

ಆತ್ಮ ಎನ್ನುವುದು.... ಪ್ರಪ್ರಥಮವಾಗಿ..... ಒಂದು ಕೋರಿಕೆಗಳ ಮೂಟೆ

ಆತ್ಮ ಎನ್ನುವುದು..... ಪರಂಪರೆಯಾಗಿ...... ಒಂದು ಅನುಭವಗಳ ಮೂಟೆ

ಆತ್ಮ ಎನ್ನುವುದು..... ಅಂತಿಮ ಪರ್ಯಾವಸಾನವಾಗಿ ಒಂದು ಜ್ಞಾನದ ಮೂಟೆ

ಇದು ಆತ್ಮದ ನಿಜವಾದ ಕಥೆ

**ಓಂ ತತ್ ಸತ್**

# ಮೌಲ್ಯಯುತ ಆಧ್ಯಾತ್ಮಿಕ ಸತ್ಯಗಳು

- ಸೃಷ್ಟಿಯಲ್ಲಿ ಕೋಟ್ಯಾನುಕೋಟಿ ಲೋಕಗಳಿವೆ.
- ನಮಗೆ ಎಷ್ಟೋ ದೇಹಗಳು ಇವೆ.
- ಮೂಲ ಚೈತನ್ಯದಿಂದ ಮಳೆಯಂತೆ ಆತ್ಮಗಳ ಸೃಷ್ಟಿಯು ಯಾವಾಗಲೂ ನಡೆಯುತ್ತಾ ಇರುತ್ತದೆ... ನಡೆಯುತ್ತಲೇ ಇರುತ್ತದೆ.
- ಪೂರ್ಣಾತ್ಮಗಳು ಎಂದರೆ ಪರಿಣಿತಿ ಹೊಂದಿದ ಆತ್ಮಗಳು ಸಹಾ ತಮ್ಮಿಂದ ನೂತನ ಅಂಶಗಳನ್ನು ಸೃಷ್ಟಿಸುವುದು ನಡೆಯುತ್ತಿರುತ್ತದೆ.

• ಮೂಲ ಚೈತನ್ಯ ಆತ್ಮಗಳಲ್ಲದ, ಪೂರ್ಣಾತ್ಮಗಳಿಂದ ಬಂದ ಅಂಶಾತ್ಮಗಳಲ್ಲದ, ಆದರೆ ಎಲ್ಲಾ ವಿವಿಧ ಅನುಭವಗಳನ್ನು ಜನನ – ಮರಣ ಚಕ್ರದಲ್ಲಿ ಆಗಲಿ, ಹೊರಗೆ ಆಗಲಿ – ಕ್ರಮವಾಗಿ ಸಂಪಾದಿಸಿಕೊಳ್ಳಬೇಕು... ಶೈಶವ ಹಂತದ ಆತ್ಮಗಳು ಎಲ್ಲವೂ ಕ್ರಮವಾಗಿ ಪರಿಣಾಮ ಕ್ರಮಗಳಲ್ಲಿ ಪೂರ್ಣ ಪರಿಣಿತಿ ಹೊಂದಲೇಬೇಕು.

  - ಆತ್ಮಗಳಿಗೆ ಯಾವಾಗಲೂ ಸಂಪೂರ್ಣ "ಇಚ್ಛೆ – ಸ್ವೇಚ್ಛೆ" ಇರುತ್ತದೆ.
  - ತಮ್ಮ ತಮ್ಮ "ಇಚ್ಛೆ – ಸ್ವೇಚ್ಛೆ" ಗಳಿಂದ ವಿಧವಿಧವಾದ ಕರ್ಮಗಳನ್ನು ಮಾಡುತ್ತಾ, ಮಾಡುತ್ತಾ.... ಅವುಗಳ ಫಲಿತಗಳನ್ನು ಅನುಭವಿಸುತ್ತಾ, ಎಷ್ಟೋ ಪಾಠಗಳನ್ನು ಕಲಿಯುತ್ತಾ, ಕಲಿತುಕೊಳ್ಳುತ್ತಾ ಇರುವುದು ಸದಾ ನಡೆಯುತ್ತದೆ.

ಇಂತಹ ಸತ್ಯಗಳು ಇನ್ನೂ ಎಷ್ಟೋ ಇವೆ? ಎಲ್ಲವೂ ಆಗಿಂದಾಗೆ ಅಲ್ಲಿಂದ ಅಲ್ಲಿಗೆ ತಿಳಿದುಕೊಳ್ಳುತ್ತಾ ಇರಬೇಕು.

**ಅಂಶಾತ್ಮ – ಪೂರ್ಣಾತ್ಮ**

**ನಾವು "ಅಂಶ" ಪುತ್ರರು**

**ನಾವೆಲ್ಲರೂ "ಋಷಿ ಪುತ್ರರು"**

ನಾವೆಲ್ಲರೂ ಕೆಳಗೆ ಕೆಳಗೆ ಇರುವ ಆತ್ಮರು "ಸತ್ಯಲೋಕಗಳಲ್ಲಿ" ಅಂದರೆ "ಮಹಾಕಾರಣ ಲೋಕ"ಗಳಲ್ಲಿ ಇರುವ "ಒಂದಾನೊಂದು ಪೂರ್ಣಾತ್ಮದ ಒಂದಾನೊಂದು ಅಂಶ" ನಾವು ಎಂದರ್ಥ.

# ಅಂಶಾತ್ಮ ಪೂರ್ಣಾತ್ಮ

ಯಾವಾಗ ನಾವು ಸಂಪೂರ್ಣವಾಗಿ ಆತ್ಮ ಪರಿಮಿತಿ ಹೊಂದುವೆವೊ

ಆಗ ನಾವು ಕೂಡ ಆ ಮಹಾ ಕಾರಣ ಲೋಕಗಳನ್ನು ಸೇರುವೆವು

ಆಗ ನಾವು ಕೂಡ ನಮ್ಮಿಂದ ನೂತನ ಅಂಶಾತ್ಮರನ್ನು ಸೃಷ್ಟಿ ಮಾಡುತ್ತೇವೆ

ಅಂದರೆ ನಾವು "ಪೂರ್ಣಾತ್ಮ" ಸ್ಥಿತಿ ಸೇರುತ್ತೇವೆ ಎಚಿದರ್ಥ.

**ಮುಂಡೋಕೋಪನಿಷತ್‌ನಲ್ಲಿ ಈ ವಿಧವಾಗಿ ಹೇಳಲಾಗಿದೆ :**

**"ದ್ವಾ ಸುಪರ್ಣಾ ಸ್ವಯುಜಾ ಸಖಾಯ ಸಮಾನಂ ವೃಕ್ಷ ಪರಿಷಸ್ವಜಾತೇ**

**ತಯೋರನ್ಯ: ಪಿಪ್ಪಲಂ ಸ್ವಾದ್ವತ್ನಶ್ನನ್ಯೋ ಅಭಿಚಾಕಶೀತಿ ॥"**

" ಎರಡು ಪಕ್ಷಿಗಳು... ಅಂದರೆ ಅಂಶಾತ್ಮ, ಪೂರ್ಣಾತ್ಮ

ಎರಡು ಒಂದೇ ಮರದ ಮೇಲೆ... ಅಂದರೆ ಒಂದೇ ಶರೀರದಲ್ಲಿ... ಕೂಡಿರುತ್ತದೆ.

ಎರಡು ಅಂದಮೈನ ಪುಕ್ಕಗಳೊಂದಿಗೆ ಒಂದೇ ವಿಧವಾಗಿ ಇರುತ್ತದೆ.

ಅವುಗಳಲ್ಲಿ ಒಂದು ಸಿಹಿಯಾದ ಹಣ್ಣನ್ನು ತಿನ್ನುತ್ತದೆ

ಎರಡನೆಯದು ಯಾವುದನ್ನು ತಿನ್ನದೇ ಸುಮ್ಮನೆ ನೋಡುತ್ತಾ ಕುಳಿತುಕೊಂಡಿರುತ್ತದೆ"

- ಧ್ಯಾನದಲ್ಲಿ ಪರಾಕಾಷ್ಟೆ ಎಂದರೆ ಪೂರ್ಣಾತ್ಮದೊಂದಿಗೆ ಅನುಸಂಧಾನ ಹೊಂದಿರುವುದು.

- **"ಪೂರ್ಣಾತ್ಮ" ಎಂದರೆ " ದ್ವಾ ಸುಪರ್ಣಾ "ಎನ್ನುವ ಋಗ್ವೇದ ವಾಕ್ಯಗಳಲ್ಲಿ ಇರುವ "ಎರಡನೇ ಪಕ್ಷಿ" ಎಂದರೆ, "ಮೇಲೆ ಇರುವ ಪಕ್ಷಿ" ಎಂದರ್ಥ.**

# ಬ್ರಹ್ಮ ಮಾನಸ ಪುತ್ರರು

ಯಾವಾಗ ನಾವು ಸಹಾ

ಪೂರ್ಣಾತ್ಮ ಸ್ಥಿತಿಗೆ ಸೇರಬಲ್ಲೆವೋ ಸೇರುವೆವೋ

ಆಗ ನಾವು ಕೂಡ ನಮ್ಮಿಂದ ಅಂಶಗಳನ್ನು ಬೇರೆಯಾಗಿ ಏರ್ಪಡಿಸಬಲ್ಲೆವು

ಹೀಗೆ ಅಂಶಗಳನ್ನು ಸೃಷ್ಟಿಸಿದರೆ "ಬ್ರಹ್ಮ– ಮಾನಸ – ಪುತ್ರರು" ಎನ್ನುತ್ತಾರೆ

ಆಗ ನಾವು ಕೂಡ ಅವರನ್ನು ಅಂದರೆ, ಅಂಶಗಳನ್ನು ಕೆಳಗಿರುವ ಕಾರಣ ಲೋಕಗಳಿಗೆ ಕಳುಹಿಸಿ

ಒಂದು ಕಡೆ ನಮ್ಮ ಸ್ವಂತ ಕೆಲಸಗಳನ್ನು ನಾವು ನೋಡಿಕೊಳ್ಳುತ್ತಾ ಮತ್ತೊಂದು ಕಡೆ ಅವರ ಒಳಿತು ಕೆಡುಕುಗಳನ್ನು ನೋಡಿಕೊಳ್ಳುತ್ತಾ ಇರುವುದು ನಡೆಯುತ್ತದೆ

ಇವರು ಕೂಡ ಯತಾವಿಧಿಯಾಗಿ

"ಜನನ – ಮರಣ– ಚಕ್ರ" ದಲ್ಲಿ ಸೇರಿ ಪಾಠಗಳನ್ನು ಕಲಿತುಕೊಳ್ಳಲೇಬೇಕು

ಯಾರ ಸ್ವೇಚ್ಛೆ ಪ್ರಕಾರ ಅವರು ವಿಹರಿಸುತ್ತಾ ಇರುತ್ತಾರೆ....

ಕ್ರಮವಾಗಿ ಪುರೋಗಮಿಸುತ್ತಾ ಇರುತ್ತಾರೆ

ನಾವು ಪೂರ್ಣಾತ್ಮರಾಗಿ ಬದಲಾದ ನಂತರವೇ ನಮ್ಮ ಸ್ವಂತ

ಮಾನಸ ಪುತ್ರರನ್ನು ಸೃಷ್ಟಿಸುವುದು ಸಾಧ್ಯವಾಗುತ್ತದೆ.

* ಪ್ರತೀ ಪೂರ್ಣಾತ್ಮ ಒಂದಾನೊಂದು 'ಬ್ರಹ್ಮ'

ಅದಕ್ಕೆ ಅವರು ಮಾನಸ ಪುತ್ರರು "ಬ್ರಹ್ಮ ಮಾನಸ ಪುತ್ರರು"

# ಬ್ರಾಹ್ಮಣರು – ದ್ವಿಜತ್ವ

ತಮ್ಮ ತಮ್ಮ ಪೂರ್ಣಾತ್ಮರೊಂದಿಗೆ ಅನುಸಂಧಾನ ಹೊಂದಿದವರು "ದ್ವಿಜರು"

**"ಬ್ರಹ್ಮ ಜಾನಾತೀ ಇತಿ ಬ್ರಾಹ್ಮಣಃ "**

**"ಬ್ರಹ್ಮಜ್ಞಾನ ಇರುವವರೇ ಬ್ರಾಹ್ಮಣರು"**

ಅಷ್ಟೇ ಹೊರತು

ಸಾಮಾನ್ಯ ಹುಟ್ಟಿನ ಮೂಲಕ ಯಾರು "ಬ್ರಾಹ್ಮಣ"ರಾಗಲಾರರು

" **ದ್ವಿಜತ್ವ** "ಎಂದರೆ ಎರಡನೆಯ ಜನನ

ಮೊದಲನೆಯ "ಜನನ " ಶಾರೀರಿಕವಾಗಿ ತಂದೆ ತಾಯಿಯರಿಂದ

ಹುಟ್ಟುವಿಕೆಯನ್ನು ಸೂಚಿಸುತ್ತದೆ... ನಮ್ಮ ಭೌತಿಕ ಕಾಯವನ್ನು ಸೂಚಿಸುತ್ತದೆ

ಮೊದಲನೆಯ ಜನನದ ಮೂಲಕ ಎಲ್ಲರೂ ಬ್ರಾಹ್ಮಣೇತರರೆ! ಎಲ್ಲರೂ ಶೂದ್ರರೇ!

ಎರಡನೇ ಜನನ ನಮ್ಮ "ಆತ್ಮ"ದ ಕುರಿತು ನಮಗೆ ಅರಿವು ಮೂಡಿಸುತ್ತದೆ

ದ್ವಿಜಯೋಗ ಸಾಧನೆ ಮೂಲಕವೇ ದ್ವಿಜತ್ವ ಲಭಿಸುತ್ತದೆ

ನಾನು ದೇವರ ಕುಮಾರ ಎಂದು ಜೀಸಸ್ ಹೇಳಿದ್ದಾರೆ

ಅಂದರೆ, ತಾನು "**ಒಂದಾನೊಂದು ಪೂರ್ಣಾತ್ಮದ ಒಂದಾನೊಂದು ಅಂಶ**" ಎಂದು

ತಿಳಿದವರು ಜೀಸಸ್ ಎಂದರ್ಥ

ಪ್ರತಿಜೀವಿ ಒಂದಾನೊಂದು ಪೂರ್ಣಾತ್ಮದ ಒಂದಾನೊಂದು ಅಂಶವೇ!

ತಾವು **'ಅಂಶಾತ್ಮ'**ರು ಎಂದು ತಿಳಿದುಕೊಂಡವರೇ ಬ್ರಾಹ್ಮಣರು, ದ್ವಿಜರು

# ಆತ್ಮಜ್ಞಾನ – ಬ್ರಹ್ಮ ಜ್ಞಾನ

"ಆತ್ಮಜ್ಞಾನ" ಎಂದರೆ, "ಆತ್ಮದ ಕುರಿತಾದ ಜ್ಞಾನ"

ಅಂದರೆ ನಮ್ಮ ಕುರಿತು ನಾವು ತಿಳಿದುಕೊಳ್ಳುವುದು

"ನಾನು ಭೌತಿಕ ಶರೀರ ಮಾತ್ರವೇ ಅಲ್ಲ ಆತ್ಮವೂ ಕೂಡಾ" ಎಂದು ತಿಳಿದುಕೊಳ್ಳುವುದು

"ನಾನು ಮೂಲ ಚೈತನ್ಯ" ಎಂದು ತಿಳಿದುಕೊಳ್ಳುವುದು

ಇದೆಲ್ಲವೂ ಧ್ಯಾನದಿಂದ ಮಾತ್ರವೇ ಸಾಧ್ಯ

ಆತ್ಮಜ್ಞಾನ ಎನ್ನುವುದು "ಪ್ರಾಥಮಿಕ ಹಂತ " ಆದರೆ ಬ್ರಹ್ಮ ಜ್ಞಾನ ಎನ್ನುವುದು "ಕೊನೆಯ ಹಂತ "

"ಬ್ರಹ್ಮಜ್ಞಾನ" ಎಂದರೆ "ಸಕಲ ಚರಾಚರ ಸೃಷ್ಟಿ ರಹಸ್ಯಗಳ ಒಂದು ಜ್ಞಾನ"

ಕೋಟ್ಯಾನು ಕೋಟಿ ಲೋಕಗಳ ಕುರಿತು ಸಾಧ್ಯವಾದಷ್ಟು ಸುಸ್ಪಷ್ಟವಾದ ವಿಜ್ಞಾನ

"ಆತ್ಮಜ್ಞಾನ" ಇಲ್ಲದೆ "ಬ್ರಹ್ಮಜ್ಞಾನ " ಎನ್ನುವುದು ಅಸಂಭವ

ಒಂದಾನೊಂದು ಆತ್ಮಜ್ಞಾನಿಯನ್ನು ಋಷಿ ಎನ್ನುತ್ತೇವೆ... "ದೃಷ್ಟ" ಎನ್ನುತ್ತೇವೆ

ಒಂದಾನೊಂದು ಬ್ರಹ್ಮಜ್ಞಾನಿಯನ್ನು " ಬ್ರಹ್ಮರ್ಷಿ "ಎನ್ನುತ್ತೇವೆ

ಸ್ವತಃ ಸಂಪೂರ್ಣ ನಿಜ ಸ್ಥಿತಿಯನ್ನು ತಿಳಿದುಕೊಂಡವನು "ಆತ್ಮಜ್ಞಾನಿ" ಹೊರಗಿನ ಪ್ರಕೃತಿಯನ್ನು ಕೂಡ ಪೂರ್ಣವಾಗಿ ಅರ್ಥ ಮಾಡಿಕೊಂಡವನೇ ಒಬ್ಬ "ಬ್ರಹ್ಮಜ್ಞಾನಿ"

ಬ್ರಹ್ಮಜ್ಞಾನಿ ಆದಾಗಲೇ ಬ್ರಹ್ಮ ಪದವಿ ಲಭಿಸುತ್ತದೆ

" ಬ್ರಹ್ಮ" ಎಂದರೆ ಸೃಷ್ಟಿಕರ್ತ – "ಕ್ರಿಯೇಟರ್" ಎಂದು

ಆತ ಕೆಲವು ಆತ್ಮಗಳನ್ನು ಕೆಲವು ಲೋಕಗಳನ್ನು ಸೃಷ್ಟಿ ಮಾಡಬಲ್ಲನು

ಸಕಲ ಲೋಕ ಜ್ಞಾನಿಯಾದವನೇ ನೂತನ ಲೋಕಗಳನ್ನು ಸೃಷ್ಟಿಸಬಲ್ಲನು....

"ಸಹಸೃಷ್ಟಿಕರ್ತ ಕೋ– ಕ್ರೀಯೇಟರ್" ಆಗಬಲ್ಲನು.

- ಆತ್ಮಜ್ಞಾನ ಎನ್ನುವುದು ಧ್ಯಾನದ ಮೂಲಕ ಲಭಿಸುವ ದಿವ್ಯಶಕ್ತಿಯ ಒಂದು ಪ್ರಾಥಮಿಕ ಸ್ಥಿತಿ
- ಬ್ರಹ್ಮಜ್ಞಾನ ಎನ್ನುವುದು ದಿವ್ಯ ಚಕ್ಷುವಿನ ಒಂದು ಪರಮ ಪರಿಪಕ್ವತಾ ಸ್ಥಿತಿ

# ನಿರ್ವಾಣದ ನಂತರ "ನಿರ್ವಾಣ"

ಅಂದರೆ "ದುಃಖರಾಹಿತ್ಯ ಸ್ಥಿತಿ" ನಿರ್ವಾಣದ ನಂತರವೂ ಸ್ಥಿತಿಗಳು ಇವೆ ನಂತರ ಇರುವುದು ಜನ್ಮರಾಹಿತ್ಯ ಸ್ಥಿತಿ ಅದರ ನಂತರ ಸೃಷ್ಟಿಕರ್ತ ಸ್ಥಿತಿ

**ಅಂದರೆ**

ತನ್ನಿಂದ  ನೂತನ ಅಂಶಾತ್ಮರನ್ನು ಸೃಷ್ಟಿಸ ಬಲ್ಲ ಸ್ಥಿತಿ

ಮತ್ತೆ ಕೆಲವು ಲೋಕಗಳನ್ನು ಸೃಷ್ಟಿಸಬಲ್ಲ ಸ್ಥಿತಿ

**ಆದ್ದರಿಂದ**

"ನಿರ್ವಾಣ" ಎನ್ನುವುದು ಮೊಟ್ಟಮೊದಲಯ ಸ್ಥಿತಿ

ತದನಂತರ ಎರಡು ಸ್ಥಿತಿಗಳಿವೆ ಅವು "ಪರಿನಿರ್ವಾಣ"..... ಹಾಗೂ "ಮಹಾಪರಿ ನಿರ್ವಾಣ"

| | | |
|---|---|---|
| ನಿರ್ವಾಣ | ಪರಿನಿರ್ವಾಣ | ಮಹಾ ಪರಿನಿರ್ವಾಣ |
| ದುಃಖರಾಹಿತ್ಯ | ಜನ್ಮರಾಹಿತ್ಯ | ಸೃಷ್ಟಿಕರ್ತ ಪದವಿ |
| ಋಷಿ | ರಾಜರ್ಷಿ/ಮಹರ್ಷಿ | ಬ್ರಹ್ಮರ್ಷಿ |
| ಅರಿಹಂತ್ | ಭೋಧಿಸತ್ವ | ಬುದ್ಧ |

ಗೌತಮ ಬುದ್ಧನು ಬೋಧಿವೃಕ್ಷದ ಕೆಳಗೆ ಧ್ಯಾನ ಪೂರ್ಣಗೊಳಿಸಿದ ನಂತರ ನಾನು "ಮಹಾಪರಿನಿರ್ವಾಣ ಹೊಂದಿದ್ದೇನೆ" ಎಂದನು.

- ಗೌತಮ ಬುದ್ಧ ಹೊಂದಿದ ಅತ್ಯುನ್ನತ ಮಹಾಪರಿನಿರ್ವಾಣ ಸ್ಥಿತಿಯನ್ನು. ಒಬ್ಬ ಬ್ರಹ್ಮರ್ಷಿ ಸ್ಥಿತಿಯನ್ನು ನಾವು ಕೂಡ ಹೊಂದಬೇಕು..... ಅದೇ ನಮ್ಮ ಧ್ಯೇಯ

# ಪೂಜಾರಿ– ಪೂರ್ಣಾತ್ಮ

**"ಪೂಜಾರಿ"**

"ಭಕ್ತಿ" ಹೆಸರಿನಲ್ಲಿ ಎಲೆಗಳನ್ನು, ಹೂವುಗಳನ್ನು ತಾನೂ ಕೀಳುತ್ತಾ, ಇತರರನ್ನು ಕೀಳುವಂತೆ ಮಾಡಿ "ಪ್ರಕೃತಿಯನ್ನು ನಾಶ ಮಾಡುವವನು"

ಚಿಕ್ಕ ಮಕ್ಕಳು ಬೊಂಬೆಗಳೊಂದಿಗೆ ಆಡಿದಂತೆ, ದೊಡ್ಡ ಬೊಂಬೆಗಳಾದ ವಿಗ್ರಹಗಳೊಂದಿಗೆ ಆಡಿಕೊಳ್ಳುವ "ದೊಡ್ಡ ಬಾಲಕ "

**"ಮಂತ್ರೋಪಾಸಕ"**

ಸಾಧನೆಯನ್ನು ನಂಬಿದವನು

ಸ್ವಲ್ಪ ಬೆಳೆದವನು...ಅಂದರೆ ಬೊಂಬೆಯಾಟವನ್ನು ಬಿಟ್ಟವನು

ಶಕ್ತಿಗಳೆಲ್ಲವೂ ತನ್ನಲ್ಲಿಯೇ ಇವೆ ಎಂದು ಗ್ರಹಿಸಿ ಆ ಶಕ್ತಿಗಳನ್ನು ಹೊರತರಲು ಅತ್ಯಂತ ಕ್ಲಿಷ್ಟಕರ ಸಾಧನೆಗಳನ್ನು ಮಾಡಲು ಅನುವಾದ "ಸಾಹಸಿ"

**"ವೇದಾಂತಿ "**

"ಪ್ರಕೃತಿಯನ್ನು ನಾಶ ಮಾಡದ ಪಂಡಿತ"

ಆದರೆ ಆತ್ಮ ತತ್ವವನ್ನು ಗ್ರಹಿಸಿದರೂ, ತನ್ನಲ್ಲೇ ಶಕ್ತಿಗಳೆಲ್ಲ ಇದೆ ಎಂದು ಗ್ರಹಿಸಿದರೂ,

ಆ ಶಕ್ತಿಯನ್ನು ಹೊರತರಲು ಯಾವ ಧ್ಯಾನ ಸಾಧನೆ ಮಾಡದೆ,

ತನ್ನ ಪದಜಾಲಕ್ಕೆ, ವಾಕ್ಚಾತುರ್ಯಕ್ಕೆ ತಾನೇ ಮುಗ್ಧನಾಗುವ "ಹುಚ್ಚ"

**"ಧ್ಯಾನ ಸಾಧಕ"**

ನಿಜವಾದ ಬುದ್ಧಿವಂತಿಕೆಯುಳ್ಳ ಮನುಷ್ಯ

ತನ್ನಲ್ಲಿ ಶಕ್ತಿಗಳು ಇವೆ ಎಂದು ಗ್ರಹಿಸಿದವನು

ಕೂಡಲೇ ಆ ಶಕ್ತಿಗಳನ್ನು ಹೊರತರಲು ಮಾಡಬೇಕಾದ

ಆನಪಾನಸತಿ – ಧ್ಯಾನಸಾಧನೆಯಲ್ಲಿ ಸಂಪೂರ್ಣವಾಗಿ ನಿಮಗ್ನನಾದವನು

**"ಅವದೂತ "**

ಧ್ಯಾನಾನುಭವದಲ್ಲಿ ಅತ್ಯಂತ ಮುಂದೆ ಸಾಗಿದವನು ನಿರಂತರ "ಇತರ ಲೋಕಗಳಲ್ಲಿ ಸೂಕ್ಷ್ಮ ಶರೀರ ಯಾತ್ರೆಗಳ ಮೂಲಕ ಸಂಚರಿಸುವವನು".

**ಆದರೆ,**

ಭೌತಿಕ ಲೋಕವನ್ನು, ಸುತ್ತಮುತ್ತಲಿನ ಪ್ರಜೆಗಳನ್ನು ಸ್ವಲ್ಪವೂ ಲೆಕ್ಕಿಸದವನು "ಹುಚ್ಚ" ಎಂದು ಈ ಲೋಕದ ಹುಚ್ಚರು ಅಂದುಕೊಳ್ಳುತ್ತಾರೆ.

**"ಸಿದ್ಧನು"**

ಧ್ಯಾನ ಪರಾಕಷ್ಠೆಯನ್ನು ಪಡೆದುಕೊಂಡು, ಅಷ್ಟಸಿದ್ದಿಗಳನ್ನು ಕರಗತ ಮಾಡಿಕೊಂಡವನು ಲೋಕ ಈತನ ಸಿದ್ದಿಗಳನ್ನು ನೋಡಿ ಭಯಪಡುತ್ತದೆ, ಆಶ್ಚರ್ಯಪಡುತ್ತದೆ

**“ಬುದ್ಧ”**

ಕೊನೆಯ ಜನ್ಮದಲ್ಲಿರುವವನು

ಎಲ್ಲರ ಸಿದ್ಧತ್ವಕ್ಕೆ ಬುದ್ಧತ್ವಕ್ಕೆ ದಾರಿ ತೋರುವವನು

ನಿರಂತರ ಧ್ಯಾನ, ಜ್ಞಾನ ಬೋಧೆ ಮಾಡುತ್ತಾ ಇರುವವನು.

"ಸಿದ್ದ"ನಾಗ ಬೇಕೆಂದರೆ, ಧ್ಯಾನವು ಪರಿಪೂರ್ಣವಾಗಬೇಕು...

"ಬುದ್ಧ" ಆಗಬೇಕೆಂದರೆ ಧ್ಯಾನ ಜ್ಞಾನ ಬೋಧನೆ ನಿರಂತರ ಮಾಡಬೇಕು

"ಒಂದಾನೊಂದು ಪೂರ್ಣಾತ್ಮ"

ಸತ್ಯಲೋಕದಲ್ಲಿ "ತಾರೆ"ಯಾಗಿ ಶಾಶ್ವತವಾಗಿ ಉಳಿದು, ತನ್ನೊಳಗಿಂದ ನೂತನ ಅಂಶಾತ್ಮರನ್ನು ಸೃಷ್ಟಿಸಿ...

ಅವರನ್ನು ಕೂಡ ಜನನ – ಮರಣ ಚಕ್ರದಲ್ಲಿ ಪ್ರವೇಶಿಸುವಂತೆ ಮಾಡಿ... ಅವರು ಕೂಡ ಬುದ್ಧರಾಗುವವರೆಗೂ ಅವರ ಒಳಿತು ಕೆಡಕುಗಳನ್ನು ನೋಡಿಕೊಳ್ಳುವವನು.

# ಸ್ಪಿರಿಚುಯಲ್ ಸೈನ್ಸ್ – ಆಧ್ಯಾತ್ಮಿಕ ವಿಜ್ಞಾನ ಶಾಸ್ತ್ರ

**"ಮಾನವ ಮನಸ್ಸು"** ಬೇರೆ... **"ಮಾನವನ ಜೀವನ"** ಬೇರೆ,

**"ಮಾನವನ ಮನಸ್ಸು"** ಸುತ್ತಮುತ್ತಲಿನ ಸಮಾಜದಿಂದ ಹಾಗೂ ಸುತ್ತಮುತ್ತಲ ವಾತಾವರಣದಿಂದ ಉದ್ಭವಿಸುತ್ತದೆ.

ಅಷ್ಟೇ ಅಲ್ಲದೆ ಆದಿ ಬೌತಿಕ ಶರೀರಕ್ಕೆ ಸೇರಿದ "ಜ್ಞಾನೇಂದ್ರಿಯಗಳ ಚೌಕಟ್ಟಿ" ನಲ್ಲಿಯೂ, ಅಧಿಕವಾಗಿ ತಿರುಗುತ್ತಾ ಇರುತ್ತದೆ.

ಅಂದರೆ ನಾವು ಯಾವುದು ಹೆಚ್ಚಾಗಿ ನೋಡುತ್ತೇವೆ.... ಹೆಚ್ಚಾಗಿ ಕೇಳುತ್ತೇವೆಯೋ ಹೆಚ್ಚಾಗಿ ರುಚಿ ನೋಡುವೆವೋ... ಅವುಗಳ ಸುತ್ತಲೂ "ಮನಸ್ಸು" ಹೆಚ್ಚಾಗಿ ಪರಿಭ್ರಮಿಸುತ್ತಾ ಇರುತ್ತದೆ.

ಆದರೆ ಮಾನವ ಜೀವನದ ಮಟ್ಟಿಗೆ ಹೇಳುವುದಾದರೆ, ಗತಜನ್ಮಗಳ ಕರ್ಮಗಳ ಮೂಲಗಳಿಂದ ಉದ್ಭವಿಸುತ್ತದೆ.

ಪ್ರಸ್ತುತ ವರ್ತಮಾನ ಜೀವನ... ಗತಜನ್ಮಗಳ "**ನಂತರದ ಪುಟವೇ** " ಆದ್ದರಿಂದ "ಅದಕ್ಕೆ ಮುಂಚೆ ಇರುವ ಪುಟಗಳು" ಅರ್ಥವಾಗದಿದ್ದರೆ, "**ವರ್ತಮಾನ ಪುಟ**" ಅರ್ಥವಾಗಲಾರದು "**ಮಾನವನ ಆತ್ಮವತ್ – ಜೀವನವನ್ನು**" ಅರ್ಥ ಮಾಡಿಕೊಂಡರೆನೇ,

"**ಮಾನವ ಮನಸ್ಸು**" ಮೇಲೆ ಅಧಿಪತ್ಯ ಲಭಿಸುತ್ತದೆ.

ಪ್ರತಿ ಮಾನವ ಜೀವನವೂ, ಉನ್ನತ ಲೋಕಗಳಲ್ಲಿರುವ....

ಆತ್ಮಲೋಕಗಳಲ್ಲಿರುವ... "**ಮೂಲಾತ್ಮ**"**ದ ಮತ್ತೊಂದು** "**ವಿಹಾರ ಯಾತ್ರೆಯಾಗಿ**" **ಮತ್ತೊಂದು** "**ವಿಜ್ಞಾನ ಯಾತ್ರೆಯಾಗಿ**" ಅರ್ಥಮಾಡಿಕೊಂಡಾಗಲೇ, ಮನಸ್ಸಿನ ಒಂದು ತೀವ್ರ ಪ್ರಭಾವದಿಂದ ನಾವು ಕ್ಷೇಮವಾಗಿ ಸುರಕ್ಷಿತವಾಗಿ ಹೊರಬರುತ್ತೇವೆ.

ವಾಸ್ತವವಾಗಿ ಇಹಲೋಕದಲ್ಲಿ ತಾತ್ಕಾಲಿಕವಾಗಿ ಜೀವಿಸುತ್ತಿರುವ ಜೀವಿಸುತ್ತಿದ್ದರೂ, ನಾವು "**ಆತ್ಮ ಲೋಕವಾಸಿಗಳೇ**", ವಾಸ್ತವವಾಗಿ ಇಹಲೋಕದಲ್ಲಿ ಭೌತಿಕ ಕಾರ್ಯದಲ್ಲಿ ನಿವಾಸಿಸುತ್ತಿರುವ, ಒಂದಾನೊಂದು "**ಸನಾತನ ಮೂಲಾತ್ಮ**"ಗಳೇ. ನಾವು ಅನೇಕಾನೇಕ ಜನ್ಮಗಳ ಕರ್ಮಗಳ, ಕರ್ಮಫಲಗಳ, ಸಂಸ್ಕಾರದಿಂದ ಜನಿತ ಸಂಕಲ್ಪಗಳ ಪ್ರಭಾವಗಳೊಂದಿಗೆ "**ಈ ವರ್ತಮಾನ ಜೀವನ ಕೂಡಿದೆ**". ವಿಧವಿಧವಾದ

ವೈವಿಧ್ಯಗಳೊಂದಿಗೆ ತುಂಬಿರುವ "ಮೂಲಾತ್ಮ" ದ ಒಂದು ನಿಜವಾದ ಲೋಕಗಳೊಂದಿಗೆ ಪ್ರಭವಿಸಿದ ಪ್ರತಿ ವರ್ತಮಾನ ಮಾನವ ಜೀವನ ಒಂದು ತಕ್ಕಡಿಯಲ್ಲೊ... ಹಾಗೂ ಮಾನವರ ಸಗಟು ಸಾಮಾಜಿಕ, ಮಾನಸಿಕ, ಸಾಮೂಹಿಕ ಕ್ಷೇತ್ರವನ್ನು ಮತ್ತೊಂದು ತಕ್ಕಡಿಯಲ್ಲೊ... ಹಾಕಿದರೆ ಈ ಎರಡಕ್ಕೆ ಮದ್ಯೆ ಅಂತ್ಯವಿಲ್ಲದ ಸಮರವಿರುತ್ತದೆ. "**ಮನಸ್ಸಿನ**" ಒಂದು ವಿಧವಿಧವಾದ ಸಂಘರ್ಷಣಗಳ ಒಳಗಿಂದ...

"ಮನಸ್ಸಿ"ನ ಒಂದು ನಿರಂತರ ಉಯ್ಯಾಲೆಯಿಂದ ತೂಗಾಡುತ್ತಿರುವ, ಸರಿಸಾಟಿಯಿಲ್ಲದ ಉತ್ತುಂಗ ತರಂಗಗಳ ಭೀಕರ ಸಾಗರ ಸ್ಥಿತಿಯೊಳಗಿಂದ ಕ್ಷೇಮವಾಗಿ ಸುರಕ್ಷಿತವಾಗಿ ಹೊರಬರಬೇಕೆಂದರೆ,

"**ಮಾನವ ಆತ್ಮ – ಜೀವನ**" ದ ಕುರಿತು ಅರ್ಥಮಾಡಿಕೊಳ್ಳಬೇಕು.

ಅದಕ್ಕಾಗಿ ಪ್ರತಿ ಮಾನವನು "**ಆತ್ಮ ಶಾಸ್ತ್ರ**", "**ಆಧ್ಯಾತ್ಮಿಕ ವಿಜ್ಞಾನ ಶಾಸ್ತ್ರ**" "**ಧ್ಯಾನಶಾಸ್ತ್ರ**" ಇತ್ಯಾದಿಗಳ ಕುರಿತು ಕ್ರಮವಾಗಿ ತಿಳಿದುಕೊಳ್ಳಲೇಬೇಕು.

ನಮ್ಮ ಪಿರಮಿಡ್ ಸ್ಪಿರಿಚುವಲ್ ಸೊಸೈಟಿ ಮೂವ್ಮೆಂಟ್ ಮೂಲಕ ಆ ಆವಿರ್ಭವಿಸಿದ ರಾಷ್ಟ್ರೀಯ ಆಧ್ಯಾತ್ಮಿಕ ವಿಜ್ಞಾನಿಗಳ ಸಭೆಯ ಮೂಲಕ " **ಆಧ್ಯಾತ್ಮಿಕ ಶಾಸ್ತ್ರವನ್ನು**"... ನಾವು ದೇಶವ್ಯಾಪ್ತವಾಗಿ, ಪ್ರಪಂಚವ್ಯಾಪ್ತವಾಗಿ ಪ್ರಚಾರ ಮಾಡುತ್ತಿದ್ದೇವೆ.

ಪ್ರತಿಯೊಬ್ಬರೂ ಮಾನವ ಆತ್ಮ ಜೀವನವನ್ನು ಅವಗಾಹನೆ ಮಾಡಿಕೊಳ್ಳುವವರಾಗಿ! ಪ್ರತಿಯೊಬ್ಬರೂ ಮನಸ್ಸಿನ ಮೇಲೆ ವಿಜಯವನ್ನು ಇನ್ನೂ ಪುಷ್ಕಲವಾಗಿ ಹೊಂದುವವರಾಗಲಿ!

ಪ್ರತಿ ಪ್ರಾಪಂಚಿಕ ಮೇಧಾವಿ ಕೂಡ "**ಸ್ಪಿರಿಚ್ಯುಯಲ್ ಸೈಂಟಿಸ್ಟ್**" ಆಗಲಿ!



ಈ ಜೀವನ ಏತಕ್ಕೆ? ಎಂಬುದು ಬಹಳ ಜನರಿಗೆ ಉತ್ತರ ಸಿಗದ ಪ್ರಶ್ನೆಯಾಗಿಯೇ ಇರುತ್ತದೆ. ನಿಜವಾಗಿಯೂ ಈ ಜೀವನದ ಲಕ್ಷಣವೇನು? ಅಂದರೆ ಈ ಜೀವನದಲ್ಲಿ ಏನು ಮಾಡಬೇಕು? ಏನನ್ನು ಸಾದಿಸಬೇಕು? ಅಸಲು ಜೀವನದ ಗಮ್ಯವೇನು? ಅಂದರೆ ಎಲ್ಲಿಗೆ ಈ ಜೀವನ ಪ್ರಯಾಣ? ಸಾಯುವವರೆಗೇನಾ? ಇಲ್ಲಾ ಇನ್ನು ಏನಾದರೂ ಇದೆಯಾ? ನಿಜವಾಗಿ ಈ ಜೀವನ ಪ್ರಯಾಣಕ್ಕೆ ಅಂತ್ಯವಿದೆಯೇ? ಇದ್ದರೆ ಂಯಾವಾ ಅಂತ್ಯವಾಗುತ್ತದೆ? ಅಂದರೆ ಎಲ್ಲಿಯವರೆಗೆ ಈ ಜೀವನ ಪ್ರಯಾಣ? ಎನ್ನವುದೂ ಕೂಡಾ ಬಹಳಷ್ಟು ಜನರಿಗೆ ಅರ್ಥವಾಗುವುದಿಲ್ಲ.

ಆದ್ದರಿಂದ ಈ ಪಶ್ನೆಗೆ ಉತ್ತರವನ್ನು ತಿಳಿದುಕೊಳ್ಳುವುದಕ್ಕೆ ಮಾಡಿದ ಪ್ರಯತ್ನವೇ “ ಈ ಜೀವನ ಏಕೆ?”

ರೂ 50/-

**ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ**

ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂದರ್ಶಿಸಿ

https: //www.youtube.com/pmckannada www.meditationeverywhere.org ● www.pssmovement.org


## ಶ್ರೀರಾಮ ಪಬ್ಲಿಕೇಶನ್ಸ್

ಶ್ರೀರಾಮಧಾಮ ಧ್ಯಾನಕೇಂದ್ರ, ನಾರಾಯಣಪ್ಪ ಗಾರ್ಡನ್,
ವೈಟ್ ಫೀಲ್ಡ್, ಬೆಂಗಳೂರು - 560 066
ಸಂಪರ್ಕಿಸಿ : ಹೆಚ್.ಎನ್. ಶ್ರೀನಿವಾಸ, 9449695503
ವಿಜಯಲಕ್ಷ್ಮಿ ಎಸ್.ಎನ್. + 91 80500 82689